ಮಾರ್ಗಾಧಿಕಾರಿಯಾದ ದೀಕ್ಷಿತನು ತಂತ್ರವಾರ್ಗ, ಮಿಶ್ರಮಾರ್ಗಗಳೆಲ್ಲಿ ಆಚಾರ್ಯಾದಿಗಳಾಗಿ ನಿಂತು ಮಾಡಕೂಡದು. ಅವಶ್ಯಾಕ್ಷ ಮಾಡಿದರೆ ಮಾಡಿ ಪಿಡಿದ ಯಜಮಾನನ ಕುಲವೂ ಆಚಾರ್ಯಾದಿಗಳಾಗಿದ್ದವರ ಕುಲವೂ ನಾಶವನ್ನು ಹೊಂದುತ್ತೆ. ತದ್ದೇವತೆಗೆ ಕೋಪವುಂಟಾಗಿ ಆ ದೇವತೆ ರಾಜರಾಷ್ಟ್ರಗಳ್ಕೆ ಭಯವನ್ನುಂಟುಮಾಡುತ್ತೆ. ತದ್ರಾಷ್ಟ್ರದಲ್ಲಿನ ಸರ್ವಸಂಪತ್ತೂ ನಾಶವಾಗುತ್ತೆ. ದಿನಕ್ರಮೇಣ ಕದಾಲಯವು ಹಾಳಾಗುತ್ತೆ ಹೀಗೆಂದು ಶೈವಪಾಂಚರಾತ್ರ ವಿಷ್ಣುಸಂಹಿತಾಶಾಸ್ತ್ರಗಳಲ್ಲಿ ಹೇಳಿರುತ್ತದೆ. ಮಿಶ್ರಾಧಿಕಾರಿ ವೈದಿಕಾಧಿಕಾರಿಗೆ ಇದರಿಂದ ಪ್ರತ್ಯವಾಯವುಂಟಾಗುತ್ತೆ. ನಮ್ಮಗಳಿಗೆ ಅಧಿಕಾರವಿಲ್ಲವಾದುದರಿಂದ ಪ್ರವೇಶಿಸಕೂಡದು ಎಂಬ ಸಂಗತಿಯನ್ನು ಶಾಸ್ತ್ರತಃ ಗುರುಮುಖೇನ ತಿಳಿದುಕೊಳ್ಳದೆ ಉದರನಿಮಿತ್ತವಾಗಿ ಸ್ವೇಚ್ಛಾನುಸಾರ ಪ್ರವರ್ತಿಸಿ ತಾವು ದೋಷಕ್ಕೆ ಪಾತ್ರರಾಗಿ, ರಾಜ ರಾಷ್ಟ್ರಗಳಿಗೂ ದೋಷಾದಿಗಳನ್ನುಂಟುಮಾಡುತ್ತಲಿರುವುದಲ್ಲದೆ ತಾವುಗಳೇ ಸರ್ವಜ್ಞರೆಂದೂ ಅಹಂಭಾವದಿಂದ ತಾವುಗಳು ಮಾಡುವದೇ ಶಾಸ್ತ್ರಸಮ್ಮತವೆಂದೂ ತಿಳಿದುಕೊಂಡಿದ್ದಾರೆ. ಧರ್ಮಪ್ರಭುಗಳಾದ ರಾಜರುಗಳು ನಮ್ಮಗಳಿಗೆ ಜನನ ಮಾತಾಪಿತೃಗಳು ಹೇಗೆಯೋ ಹಾಗೆ ಪ್ರತ್ಯಕ್ಷದೈವವು ಇವರ ಪೋಷಣೆಯಲ್ಲಿದ್ದುಕೊಂಡು ಶ್ರೇಯೋಭಿವೃದ್ಧಿಯನ್ನು ಮಾಡುತ್ತೇವೆಂದು ಹೇಳುತ್ತಾ ಸ್ವಸ್ವಮಾರ್ಗವನ್ನು ಪರಿತ್ಯಜಿಸಿ, ವಿಪರೀತ ನಡತೆಯಿಂದ ಅವರಿಗೆ ಅಶ್ರೇಯಸ್ಸನ್ನೂ ದೈವದ್ರೋಹಕ್ಕೆ ಪಾತ್ರರನ್ನೂ ಮಾಡಿ, ಪ್ರಜಾ ಗ್ರಾಮ ರಾಷ್ಟ್ರಕ್ಷಯಕ್ಕೆ ಪ್ರಳಯಕಾಲದ ಸಂಹಾರಕನಂತೆ ಕಾರಣಭೂತರಾಗಿರುವುದು ಧರ್ಮವಾಗಿಲ್ಲ. ರಾಜಕೀಯರು ದೈವವಿದ್ಯಾನಭಿಜ್ಞರಾದ ಮಿಶ್ರಾಧಿಕಾರಿ, ವೈದಿಕಮಾರ್ಗಾಧಿಕಾರಿಗಳು ಹೇಗೆ ಮಾಡಿದರೂ ಶಾಸ್ತ್ರೀಯವೆಂದೇ ತಿಳಿದುಕೊಂಡಿರಬಹುದು. ಸ್ವಯಂವ್ಯಕ್ತರೂಪ, ಸ್ಥಾಪನರೂಪ, ಸ್ಥಲಭೇದವಿಷಯವು, ಅಧಿಕಾರಿಗಳ ವಿಷಯವು, ಶಾಸ್ತ್ರಭೇದವಿಷಯವು ಸಹ ಪ್ರಭುಗಳಿಗನುರಿಗೆಶ ದ್ಧವಾಗಿ ತಿಳಿಯದು. ದೇಶಾಧಿಪತಿಗಳು ಶಾಸ್ತ್ರವಿಷಯವನ್ನು ವಿಶ್ರದೀಕ್ಷಿತರನ್ನು ಕೇಳಿದರೆ ಅವರು ಸ್ವಸ್ವ ಪಿದ್ಧಾನ್ತಕ್ಕೆ ಕೇವಲ ವಿರುದ್ಧವಾದ ಪರಶ್ರುತಿ, ಏಕಾಯನ ವೇದದಲ್ಲಿನ ಅಗೆಮ, ಮಂತ್ರ, ತಂತ್ರ, ತಂತ್ರಾಂತರಾದಿ ಶಾಖಾನುಷ್ಠಾನದವರ ಸ್ವಯಂವ್ಯಕ್ತಾದ್ಯುಕ್ತ ವಿಧಿಗಳನ್ನೇ ಘಟಪಟಾದಿ ಶಬ್ದಗಳಿಂದ ಪಾಂಡಿತ್ಯವನ್ನು ತೋರಿಸುವುದಕ್ಕೆ ಹೇಳುತ್ತಾರೆ. ಇವರು ಹೇಳತಕ್ಕ ಭಾಗಗಳು ಯಾವುದೂ

ಚ್ಛ್ರಯಣ, ಪ್ರತಿಮಾಧಾನ, ದೇವಕಲ್ಪನ ಇತ್ಯಾದಿ ಕರ್ಮಗಳಿಂದನ್ವಿತವಾದ ಉದ್ಯಾಪನನಾಮಕ ಪ್ರತಿಷ್ಠಾವಿಧಿಯನ್ನೂ ಮಿಶ್ರಮಾರ್ಗೋಕ್ತವಿಧಾನಗಳಲ್ಲಿ ಸ್ವಯಂವ್ಯಕ್ತರೂಪ, ಸ್ಥಾಪನರೂಪಾಲಯಗಳಿಗಾಗಿ ಶ್ರೇಷ್ಠಂತರವೆಂದು ಹೇಳಲ್ಪಟ್ಟಿರುತ್ತೆ.

ಈಶಾನಬಲಿ, ಶೂಲಗೆವ ನಾಮಕರ್ಮಪೂಜಾವಿಧಿಯೂ, ವೈವಾಹಿಕೋತ್ಸವ ವಿಧಿಯೂ, ಜಾತಕರ್ಮಾದಿ ವ್ರತಚಡತುಷ್ಟಯಾಂತ ಸಂಸ್ಕಾರಗಳಿಂದನ್ವಿತವಾದ ಉದ್ಯಾಪನವಿಧಿಯು (ಉದ್ಯಾಪನಶಬ್ದವು ಪ್ರತಿಷ್ಠಾಪರ ಪರ್ಯಾಯನಾಮವು.) ವೈದಿಕಮಾರ್ಗೋಕ್ತವಿಧಾನಗಳಲ್ಲಿ ಸ್ಥಾಪನರೂಪಾಲಯ, ಕೇವಲ ಮಾನುಷಾಲಯಗಳಿಗಾಗಿ ಭಗವಚ್ಛಾಸ್ತ್ರದಲ್ಲಿ ಒಂದುಕ್ಕೊಂದು ಕಿಂಚಿತ್ತಾದರೂ ಪೂಜೋತ್ಸವ ಪ್ರತಿಷ್ಠಾವಿಷಯಗಳಲ್ಲಿ ಸಂಬಂಧವಿಲ್ಲದಂತೆ ಮತ್ತು ಆಗಮ ಸಿದ್ಧಾಂತಾದಿ ಮಾರ್ಗಗಳಲ್ಲಿನ ಪೂಜಾಪ್ರತಿಷ್ಠಾ ಮಹೋತ್ಸವಾದಿ ನಾಮಗಳನ್ನೂ ಸಹ ಸಮೂಲವಾಗಿ ಸ್ವಯಂವ್ಯಕ್ತರೂಪ ಸ್ಥಾಪನರೂಪ ಸ್ಥಲೋಕ್ತ ವಿಧಾನಗಳಲ್ಲಿ ಹೇಳದೆ ತ್ಯಜಿಸಿ, ಬಲಿ, ಯಾತ್ರಾ, ಉದ್ಯಾಪನಾದಿ ಶಬ್ದಗಳಿಂದ ಸ್ಫುಟವಾಗಿ ತತ್ತದ್ವಿಧಾನಗಳನ್ನುಹೇಳಿರುತ್ತೆ. ಮಿಶ್ರಾಧಿಕಾರರಿಗೆ, ಸ್ವಯಂವ್ಯಕ್ತರೂಪ, ಸ್ಥಾಪನರೂಪ, ನಾಮಕ ದ್ವಿವಿಧಸ್ಥಲೋಕ್ತ ವಿಧಾನಗಳು ವಿಹಿತವಾದುವು. ವೈದಿಕ ಮಾರ್ಗಾಧಿಕಾರಿಗೆ ಸ್ವಯಂವ್ಯಕ್ತರೂಪಸ್ಥಲೋಕ್ತವಾದ ವಿ.ಶ್ರಮಾರ್ಗೋಕ್ತ ವಿಧಾನಗಳು ಕೇವಲ ನಿಷಿದ್ಧವಾಗಿರುವುವು.

ಮತ್ತು ಸ್ವಯಂವ್ಯಕ್ತಾದ್ಯಾರ್ಜಂತ ಸ್ಥಲೋಕ್ತಗಳಾದ ಅಗಮಸಿದ್ಧಾಂತಾದಿ ಸಿದ್ಧಾಂತ್ತಗಳಲ್ಲಿ ಹೇಳಿರುವ ವಸಂತನವರಾತ್ರ ಜಲಕ್ರೀಡೋತ್ಸವಾದಿ ದ್ವಾದಶಮಾಸಗಳಲ್ಲಿನ ನಿತ್ಯನೈಮಿತ್ತಿಕ ಕಾಮ್ಯಪೂಜೋತ್ಸವಾದಿಗಳು ಯಾವುದೂ ಮಿಶ್ರವೈದಿಕ ಸಿದ್ಧಾನ್ತಿಗಳು ಸ್ವಯಂವ್ಯಕ್ತರೂಪ, ಸ್ಥಾಪನ ರೂಪಾಲಯಗಳಲ್ಲಿ ಮಾಡಕೂಡದು. ಮಾಡಿದರೆ ರಾಜರಾಷ್ಟ್ರ, ಯಜಮಾನ, ಆಚಾರ್ಯರಿಗೆ ದೋಷಗಳಕ ಪ್ರಾಪ್ತಿಯಾಗುತ್ತೆಂದು ಘಂಟಾಘೋಷವಾಗಿ ಹೇಳಿರುತ್ತೆ.

ಸ್ಥಾಪನರೂಪ, ಸ್ವಯಂವ್ಯಕ್ತರೂಪ, ಸ್ಥಲೋಕ್ತ ವಿಧಾನಗಳಲ್ಲಿ, ಪವಿತ್ರ, ಜಲಾಧಿವಾಸ, ಸ್ನಾಪ, ಪವಿತ್ರ, ದೀಪಾವಲೀ, ಪ್ರಬೋಧ, ಜಯಂತೀ, ತ್ರಿಪುರಾಖ್ಯೋತ್ಸವಗಳನ್ನು ಮಾತ್ರ, ತಾಂತ್ರಿಕ ಮಿಶ್ರವೈದಿಕ ಪ್ರಯೋಗವಿಧಿಯು ಮಾಡಬೇಕೆಂದು ಹೇಳಿರುತ್ತೆ.

ಷ್ಟಕಾಪ್ತ್ರೀಯವಾಗಿರುವದಿಲ್ಲ. ರಾಜರಾಷ್ಟ್ರಕ್ಕೆ ಪ್ರಾಪ್ತಿಸಿರುವ ದೋಷ ಗಳೂ ಯಾಜ್ಞಿಕಪೂಜಕರ ಆವತ್ತುಗಳೂ ಇದರಿಂದ ಎಷ್ಟು ಮಾತ್ರವೂ ನಿವಾರಣೆಯಾಗಲಾರದು.

ಅರಣಿಜನಿತವಾದ ಅಗ್ನಿಯಲ್ಲಿ ಆಗಮ ಮಂತ್ರ ತಂತ್ರಾದಿ ಸಿದ್ಧಾ ಸ್ತ್ರೋಕ್ತ ಪ್ರತಿಷ್ಠಾದಿ ಕಲ್ಪಗಳಲ್ಲಿ ಹೇಳಿರತಕ್ಕ ಹೋಮಗಳನ್ನು ಜ್ಞಾನ ದಿಂದಾಗಲೀ ಅಜ್ಞಾನದಿಂದಾಗಲೀ ದಂಭಮೋಹಾದಿಗಳಿಂದಾಗಲೀ ಮಾಡಿ ದರೆ ಆಚಾರ್ಯ ಋತ್ವಿಕ್ ಯಜಮಾನ ರಾಜ ರಾಷ್ಟ್ರಗಳೆಲ್ಲವೂ ನಾಶವಾಗುತ್ತೆಂದು ಹೇಳಿರುತ್ತೆ.

ಕಾಷ್ಠಜನಿತಾದಿ ಲೌಕಿಕಾಗ್ನಿಗಳಿಗೆ ಶೈವ ವೈಷ್ಣವ ಸಂಸ್ಕಾರಗಳನ್ನು ಹೇಳಿರುವದಿಲ್ಲ. ಯಾಜ್ಞಿಕರು ಸ್ವಸ್ವಮಾರ್ಗೋಕ್ತ ವಿಧಿಯನ್ನು ಪರಿತ್ಯಜಿಸಿ, ಶೈವೀಕರಣಾದಿಗಳನ್ನು ಕಲ್ಪಿಸಿಕೊಂಡು ಲೌಕಿಕಾಗ್ನಿಗಳಿಗೆ ಮಾಡಿದ ಮಾತ್ರ ದಿಂದಲೇ ಶಿವಾಗ್ನಿ, ವೈಷ್ಣವಾಗ್ನಿಯಾಗುತ್ತದೆಯೆ; ಕಾಳವು ಹಂಸವಾಗಿ ಹೇಗೆ ಆಗುವದಿಲ್ಲವೋ ಇದು ಹಾಗೆಯೇ ಎಂದಿಗೂ ಆಗಲಾರದು. ಹಾಗೆ ವಿಚಾರಾಧಿ ಕಾರಿ ವೈದಿಕಮಾರ್ಗಾಧಿಕಾರಿಗಳು ಮಾಡಕೂಡದೆಂದು ಘಂಟಾಘೋಷ ವಾಗಿ ಹೇಳಿರುತ್ತೆ. ಸಾಕ್ಷಾತ್ಶಿವಾಗ್ನಿ ವೈಷ್ಣವಾಗ್ನಿಯಲ್ಲದೇ ಹೋದರೂ ಭಾವನಾಮಾತ್ರದಿಂದ ಕಲ್ಪಿಸಿರುವ ಶಿವಾಗ್ನಿ, ವೈಷ್ಣವಾಗ್ನಿಗಳಲ್ಲಿಯೂ ಸಹ ಋಗಾದಿವೇದಮಂತ್ರಗಳಿಂದ ಹೋಮವನ್ನು ಮಾಡಕೂಡದು. ಮಾಡಿದ ವನ ಭಾರ್ಯಾ ಪುತ್ರರು ತಕ್ಷಣವೇ ನಾಶವಾಗುವುದಲ್ಲದೆ ರಾಜ ರಾಷ್ಟ್ರಕ್ಕೂ ಮಹಾ ದೋಷಗಳು ಪ್ರಿಪ್ರದಲ್ಲಿಯೇ ಸಂಭವಿಸುತ್ತೆಂದು ಹೇಳಿರುತ್ತೆ

ಪರಮಾಚಾರ್ಯೇಂದ್ರರಾದ ಅಪ್ಪರ್, ಸುಂದರ, ಮಾಣಿಕ್ಯವಾಚಕರ್, ಜ್ಞಾನಸಂಬಂಧಮೂರ್ತಿ, ಶ್ರೀ ಶರಗೋಪಯತೀಂದ್ರಪ್ರಭೃತರು ಈ ಭಾರತ ವರ್ಷದಲ್ಲಿನ ಯಾವ ಯಾವ ಕ್ಷೇತ್ರಗಳನ್ನು ಪ್ರಾಶಸ್ತ್ಯವಾಗಿ ತಮ್ಮ ತಮ್ಮ ದಿವ್ಯ ಸೂಕ್ತಿಪ್ರಬಂಧ ಗ್ರಂಥಗಳಲ್ಲಿ ವರ್ಣಿಸಿ ಹೇಳಿದಾ ರೆಯೋ ಆಯಾ ದಿವ್ಯ ದೇಶಗಳಲ್ಲಿನ ಆಲಯಗಳಲ್ಲಿ ಮಾತ್ರ ಆಯಾ ದಿವ್ಯದೇಶ, ಸ್ಥಳಪುರಾಣ ಗಳೊಳಗೂ ದ್ರಾವಿಡಾಮ್ನಾಯದೊಳಗೂ ಸಹ ಶೈವಪಾಂಚರಾತ್ರ ಶಾಸ್ತ್ರ ಗಳಲ್ಲಿನ ಯಾವಯಾವ ತಂತ್ರದಿಂದ ಯಾವ ಯಾವ ದಿವ್ಯ ಕ್ಷೇತ್ರದಲ್ಲಿ ನಿತ ನೈಮಿತ್ತಿಕಾದಿ ಕರ್ಮಗಳನ್ನು ಮಾಡಬೇಕೆಂದು ಹೇಳಲ್ಪಟ್ಟಿದೆಯೋ ಅಂತಹ ದಿವ್ಯದೇಶಗಳಲ್ಲಿ ಶಿವಾರಾಧಕರು ಶೈವಶಾಸ್ತ್ರದಲ್ಲಿನ ದಿವ್ಯದೇಶಕ್ಕೆ ನಿರ್ಣಯಿ

ನಲ್ಪಟ್ಟ ತಂತ್ರದಿಂದಲೂ, ವಿಷ್ಣ್ವಾರಾಧಕರಾದ ಭಾಟ್ಟರು ದಕ್ಷಿಣದೇಶ
ದಲ್ಲಿರುವ ಆಯಾ ದಿವ್ಯ ದೇಶಗಳಲ್ಲಿಮಾತ್ರ ಶ್ರೀ ಪಾಂಚರಾತ್ರಶಾಸ್ತ್ರದಲ್ಲಿನ
ಆಯಾ ದಿವ್ಯದೇಶಗಳಿಗೆ ನಿರ್ಣಯಿಸಿದ ತಂತ್ರದಿಂದಲೂ, ಅಥವಾ ನಾರದ
ಪಾಂಚರಾತ್ರದಲ್ಲಿ ಹೇಳಿದಪ್ರಕಾರವಾಗಿಯೂ, ಈ ಉಭಯರ ಮಿಶ್ರವೈದಿಕ
ಮಾರ್ಗಗಳಿಂದಲೂ, ವಿಷ್ಣ್ವಾರಾಧಕರಾದ ದೀಕ್ಷಿತರು ದಿವ್ಯಸ್ಥಳಗಳಲ್ಲಿರುವ
ಮಂದರಕ್ಷೇತ್ರದಲ್ಲಿ ಮರೀಚಿಪ್ರೋಕ್ತವಾಗಿಯೂ, ವೆಂಕಟಾಚಲ ಕ್ಷೇತ್ರದಲ್ಲಿ
ಅತ್ರಿಪ್ರೋಕ್ತವಾಗಿಯೂ, ವಿಷ್ಣ್ವಧಿಷ್ಠಾನ ಕ್ಷೇತ್ರದಲ್ಲಿ ಕಾಶ್ಯಪೋಕ್ತ
ನಾಗಿಯೂ, ಶುಭ್ರಕ್ಷೇತ್ರದಲ್ಲಿ ಭೃಗುಪ್ರೋಕ್ತವಾಗಿಯೂ, ಈ ನಾಲ್ಕು
ಕ್ಷೇತ್ರಗಳಿಗಿಂತಲೂ ಉಳಿದ ದಿವ್ಯಕ್ಷೇತ್ರಗಳಲ್ಲಿ ಸರ್ವತ್ರ ಹಾರೀತೋಕ್ತ
ವಾಗಿಯೂ ಅನುಷ್ಠಿಸಬೇಕು. ಆ ಮಹನೀಯರು ದಿವ್ಯದೇಶವೆಂದು
ಹೇಳದಿರುವ ಇತರ ಸ್ಥಳಗಳು ಅಂದರೆ ಪಟ್ಟಣ, ಪುರ, ಗ್ರಾಮಾದಿ
ಗಳ ಯಾವ ಆಲಯಗಳಲ್ಲಿಯೂ ಶೈವಶಾಸ್ತ್ರೋಕ್ತ, ಶ್ರೀಪಾಂಚರಾತ್ರೋಕ್ತ,
ವೈಖಾನಸೋಕ್ತಗಳಿಂದ ಆಚರಿಸಬಾರದೆಂದೂ, ಕೇರಳದೇಶದಲ್ಲಿನ ದಿವ್ಯ
ದೇಶಗಳಲ್ಲಿಮಾತ್ರ ಆಯಾಯ ಕ್ಷೇತ್ರಗಳಿಗೆ ಶ್ರೀ ಪಾಂಚರಾತ್ರಶಾಸ್ತ್ರದಲ್ಲಿ
ಯಾವ ಯಾವ ತಂತ್ರವು ಹೇಳಲ್ಪಟ್ಟಿದೆಯೋ ಆಯಾ ತಂತ್ರರೀತಿಯಾಗಿಯೂ
ಅಥವಾ ಹಯಶೀರ್ಷ ಪಾಂಚರಾತ್ರೋಕ್ತವಾಗಿ ಆಚರಿಸಬೇಕೆಂದೂ, ಕಾಶ್ಮೀ
ರಾದಿ ದೇಶಗಳಲ್ಲಿ ಶಿವಾರ್ಚಕರು ತಂತ್ರೋಕ್ತವಾಗಿಯೂ, ಅಮರೇಶ್ವರಾದಿ
ಸ್ಥಳಗಳಲ್ಲಿ ಡಾಮರೋಕ್ತವಾಗಿಯೂ, ಕರ್ಣಾಟಕ, ಕೇರಳ, ಕೊಂಕಣ,
ಘೂರ್ಜರ, ಆಂಧ್ರ ವಿದರ್ಭಾದಿ ದೇಶಗಳಲ್ಲಿ ಯಾಮಳೋಕ್ತವಾಗಿಯೂ,
ಪಾಂಚರಾತ್ರರು ದಿವ್ಯದೇಶಗಳಿಗಿಂತಲೂ ಬೇರೆಯಾದ ಸಮಸ್ತ ಸ್ಥಳಗಳ
ಲ್ಲಿಯೂ ನಾರದಪಾಂಚರಾತ್ರೋಕ್ತವಾಗಿಯೂ, ವೈಖಾನಸರು ಸ್ವಗೃಹ್ಯ
ಸೂತ್ರೋಕ್ತವಾಗಿಯೂ ಅನುಷ್ಠಿಸಬೇಕೆಂದು ಭಗವಚ್ಛಾಸ್ತ್ರಗಳಲ್ಲಿಯೂ
ದ್ರಾವಿಡಾಮ್ನಾಯಗಳಲ್ಲಿಯೂ ಪೂರ್ವಾಚಾರ್ಯರ ನಿಬಂಧಗ್ರಂಥಗಳಲ್ಲಿಯೂ
ಇನ್ನೂ ಆಯಾ ದಿವ್ಯ ಸ್ಥಳಪುರಾಣಗಳಲ್ಲಿಯೂ ಸಹ ಹೇಳಿರುತ್ತದೆ. ದೇಶ
ಭೇದದಿಂದ ಬ್ರಾಹ್ಮಣರು ಯುಗಾದಿ ವೇದಶಾಖಾನುಷ್ಠಾನಗಳನ್ನೂ, ಬೋ
ಧಾಯನಾದಿ ಸೂತ್ರಾನುಷ್ಠಾನವನ್ನೂ ಹೇಗೆ ವಂಶಪರಂಪರೆಯಾಗಿ ವಿಚ್ಛಿತ್ತಿ
ಇಲ್ಲದೆ ವಿಹಿತವೂಲಕ ಮಾಡುತಲಿದ್ದಾರೆಯೋ ಹಾಗೆಯೇ ದೇಶಭೇದದಿಂದ
ಹೇಳಿರುವ ತತ್ತಚ್ಛಾಸ್ತ್ರಾನುಷ್ಠಾನಗಳನ್ನು ಬಿಡದೆ ಧೇನನುಂದಿರಗಳಲ್ಲಿ

ಆಶ್ರಮಧರ್ಮಗಳನ್ನೂ ಆವಶ್ಯಕವಾಗಿ ಬಿಟ್ಟು ಭ್ರಷ್ಟರಾಗಿ ವಿಧಿನಿಷೇಧಗಳಲ್ಲದೆ ಪ್ರಕೃತದಲ್ಲಿ ಅವಧೂತರಾಗಿ ಸಂಚರಿಸುತ್ತಲಿರುವರಂತೆ ಹೇಳಿಸುತ್ತೆ.

ಸ್ವಯಂವ್ಯಕ್ತರೂಪ, ಸ್ಥಾಪನರೂಪ, ಸ್ಥಲೋಕ್ತ ಆರಾಧನೆ, ಉತ್ಸವಾದಿ ವಿಧಿಗಳು ಅಧುನಾತನಕಾಲದ ಪೂಜಕ ಯಾಜ್ಞಿಕರಿಗೆ ಶುದ್ಧವಾಗಿ ಯಾವ ದೇಶದಲ್ಲಿಯೂ ತಿಳಿಯದ್ದೇ ಇರುತ್ತೆ. ಆದರೆ ನಾನು ಸರ್ವಜ್ಞನೆಂಬ ಅಹಂಭಾವದಿಂದ ಹೇಳಿದ ಮಾತಲ್ಲ ಗುರುಕುಲವಾಸವು, ಮೂಲ ಸಂಹಿತೆಗಳ ಅಧ್ಯಯನವು ಶುದ್ಧವಾಗಿಲ್ಲದೆ ಇರುವುದೇ ಮುಖ್ಯ ಕಾರಣವು ತಿಳಿದವರು ಪ್ರಾಚೀನಯಾಜ್ಞಿಕರು ದೇಶಾಂತರಗಳಲ್ಲಿ ಒಬ್ಬರಿಬ್ಬರಿದ್ದರೂ ಸ್ವೋದರ ಪೋಷಣಾಸಕ್ತರಾದ ನವೀನ ತಂತ್ರಜ್ಞರ ಹಾವಳಿಯಿಂದ ಮೌನರಾಗಿರುವರು. ತಮ್ಮ ತಮ್ಮ ಅಧಿಕಾರಕ್ಕೂ ಸ್ವಯಂವ್ಯಕ್ತರೂಪ, ಸ್ಥಾಪನರೂಪಾಲಯಗಳಿಗೂ ಸಂಬಂಧಪಟ್ಟ ಕರ್ಮಗಳನ್ನು ಬಿಟ್ಟು ಅಧಿಕಾರಕ್ಕೂ ಜಂಬೂದ್ವೀಪದಲ್ಲಿ ತಮ್ಮಗಳಿಗೆ ಉಕ್ತವಾಗಿರತಕ್ಕ ಸ್ಥಲಗಳಿಗೂ ಕೇವಲ ನಿಷಿದ್ಧವೆಂದು ಹೇಳಲ್ಪಡುವ ಕರ್ಮಗಳನ್ನೇ ಸರ್ವತ್ರ ಆಚರಣೆಯಲ್ಲಿ ತಂದುಕೊಂಡು ದೈವಕಾರ್ಯಗಳನ್ನು ಮಾಡಿಸುವ ಯಜಮಾನರ ವಂಶವು ನಾಶವನ್ನು ಹೊಂದುವ ಹಾಗೆ ಮಾಡುವದನ್ನುನೋಡಿದರೆ ಎಂಥವರಿಗೂ ಖೇದವನ್ನುಂಟುಮಾಡುತ್ತೆ.

ಅಲ್ಲಲ್ಲಿ ದೇವಾಲಯಗಳ ಯಜಮಾನರ ವಂಶಗಳು ಯಾಜ್ಞಿಕ ಅರ್ಚಕರ ವಂಶಗಳಹಾಗೆ ಬಹಳ ನಶಿಸಿರುತ್ತೆ. ಸ್ವಸ್ವಸಿದ್ಧಾಂತ ಮಾರ್ಗವನ್ನು ಬಿಟ್ಟು ಶ್ವೇತದ್ವೀಪ, ಕುಶದ್ವೀಪ, ಸೂರ್ಯಮಂಡಲದಲ್ಲಿನ ಸ್ವಯಂವ್ಯಕ್ತಾದಿ ಸ್ಥಲಗಳಿಗೆ ಉಕ್ತವಾಗಿ ಹೇಳಿರತಕ್ಕ ವಿಧಿಗಳಾದ ಆಗಮಸಿದ್ಧಾಂತಾದಿ ಸಿದ್ಧಾಂತ ಮಾರ್ಗಗಳಿಂದ ಮಿಶ್ರರೂ, ದೀಕ್ಷಿತರೂ ಪೂಜಾದ್ಯತ್ಸವಾದಿಗಳನ್ನು ಮಾಡಿದರೆ ರುದ್ರೋಘಾತುಕಃ| ರುದ್ರೋವೈಕ್ರೂರಃ | ಎಂದು ಶ್ರುತಿಗಳಲ್ಲಿ ಹೇಳಿರುವಂತೆ ದುರ್ಮಾರ್ಗದಲ್ಲಿ ಕ್ರೂರನಾದ ರುದ್ರನು ಮತ್ತಷ್ಟು ಕ್ರೂರನಾಗಿ ಆಚಾರ್ಯ ಅರ್ಚಕ ಯಜಮಾನರ ವಂಶಗಳನ್ನೆನಾಶಮಾಡಿ ದಿನಕ್ರಮದಲ್ಲಿ ತ್ತದ್ರಾಮಾಧಿಪತಿ ರಾಜರಾಷ್ಟ್ರಾದಿ ಸ್ಥಾನಾಲಯವನ್ನು ನಾಶವನ್ನು ಮಾಡುತ್ತಾನೆ.

ಮಿಶ್ರಮಾರ್ಗದಲ್ಲಿ ದೀಕ್ಷೆಯನ್ನು ಹೊಂದಿದವನು ಭಗವಚ್ಛಾಸ್ತ್ರದಲ್ಲಿನ ಆಗಮಸಿದ್ಧಾಂತ ಪ್ರಭೇದ ಮಾರ್ಗಗಳ ವೈಕಿ ಯಾವದೊಂದರಲ್ಲಿಯೂ ಕರ್ಷಣಾದಿ ಕ್ರಿಯೆಗಳನ್ನ ಮಾಡಕೂಡದು. ಮತ್ತು ಆಚಾರ್ಯ, ಆರ್ತ್ವಿಜ್ಯ, ಪೂಜಕತ್ವ, ಅಧಿಕಾರವನ್ನು ಮಾರ್ಗಭೇದವಲ್ಲಿ ಪರಿಗ್ರಹಿಸಕೂಡದು. ವೈದಿಕ

ಮಾಡಬೇಕಾದದ್ದು ವಿಹಿತವಾಗಿರುತ್ತದೆ. ಆದರೂ ವ್ಯಕ್ತಿಗತವಾಗಿ ತಪ್ಪುಮಾಡುತ್ತಾ
ವಾಗಿ ನಡೆಯುವುದಕ್ಕೆ ಕಾರಣವಿದೆ. ಶುದ್ಧಾಂಗವಾಗಿ ತ್ಯಜಿಸಿರುತ್ತಾರೆ.
ಆರ್ಷೇಯದಿಂದಲೂ ನಡೆದುಬಂದಿರುವ ಶಾಸ್ತ್ರಸಂಪ್ರದಾಯಗಳನ್ನು
ಮಹನೀಯರು ಬಿಟ್ಟ ಬೇರೆ ಪರಂಪರೆಯಾಚರಣೆಗಳಂತೆ ಬಂದೇವಿಧ
ವಾದ ಶಾಸ್ತ್ರದಿಂದ ಸರ್ವತ್ರ ಜರಗಿಸುತ್ತಲೂ, ಕೆಲವರು ಜರಗಿಸಲು
ಈಗೀಗೆ ಪ್ರಯತ್ನಪಡುತ್ತಲೂ ಇದ್ದಾರೆ ಇದು ಪ್ರಮಾದವು. ಹೀಗೆಮಾಡ
ವುದರಿಂದ ಶಾಸ್ತ್ರಸಾಂಕರ್ಯವಾಗುತ್ತದೆ. ಈ ಶಾಸ್ತ್ರಸಾಂಕರ್ಯದಿಂ
ರಾಜ ರಾಷ್ಟ್ರಗಳಿಗುಂಟಾಗುವ ಮಹೋತ್ಪಾತಗಳನ್ನೂ ಯಜಮಾನಾ
ರ್ಚಕ ಆಚಾರ್ಯರಿಗುಂಟಾಗುವ ದೋಷಗಳನ್ನು, ಹೇಳುವುದಕ್ಕೂ ಬರೆಯುವ
ದಕ್ಕೂ ಅಸಾಧ್ಯವಾಗಿದೆ. ಇದು ಶಾಸ್ತ್ರಗಳಿಗೂ, ಪೂರ್ವಾಚಾರ್ಯರ ಸಿದ್ಧಾಂತ
ಗಳಿಗೂ ಕೇವಲ ವಿರುದ್ಧವೂ ಪೂರ್ವದಿಂದಲೂ ಯಾವ ಯಾವ ಆಚಾರ್ಯ
ಪರಂಪರೆಯವರು ಮಾಡುತ್ತಲಿದ್ದರೋ ಆಯಾಯ ಆಚಾರ್ಯಪರಂಪರೆಯವರಿಂ
ದಲೇ ಆಯಾ ದೇವನುದ್ದಿಶಗಳಲ್ಲಿ ರಥಯಾತ್ರಾದಿ ನೈಮಿತ್ತಿಕ ಕಾವ್ಯಕರ್ಮಗ
ಳನ್ನುಮಾಡುವುದು ಶಾಸ್ತ್ರೀಯವಾಗಿರುತ್ತದೆ. ಆಯಾ ವಂಶಪರಂಪರೆಯ
ವರಲ್ಲದ ಇತರರು ಮಾಡಿದರೆ ಆಚಾರ್ಯಸಾಂಕರ್ಯವಾಗುವುದು. ಸಾಂಕರ್ಯದಿಂದ
ದೋಷಗಳು ಸಂಭವಿಸುತ್ತದೆಂದು ಭಗವಚ್ಛಾಸ್ತ್ರದಲ್ಲಿ ಹೇಳಿರುತ್ತದೆ.
ಆದರೂ ಈಗಿನಕಾಲದಲ್ಲಿ ಸ್ವಪ್ರತಿಷ್ಠತೆಯನ್ನು ಹೊಂದಬೇಕೆಂಬ ಆಶೆಯಿಂದ
ಅಲ್ಲಲ್ಲಿ ಆರ್ತಕಸಮೂಹದವರು ಪೂರ್ವದಲ್ಲಿ ಯಾವ ಶಾಸ್ತ್ರ ಯಾವ ತಂತ್ರ,
ಯಾವ ಸಿದ್ಧಾಂತಗಳರೀತ್ಯಾ ಯಾವ ಆಚಾರ್ಯರು ಮಾಡಿಸುತ್ತಿದ್ದರೋ ಆವೆಲ್ಲ
ವನ್ನೂ ಹರದುರಾಗ್ರಹದಿಂದ ವ್ಯತ್ಯಾಸವನ್ನು ಮಾಡುತ್ತಾ ಶಾಸ್ತ್ರಸಂ
ಕರ, ತಂತ್ರಸಂಕರ, ಸಿದ್ಧಾಂತಸಂಕರ, ಮಾರ್ಗಸಂಕರ, ಆಚಾರ್ಯಸಂಕರ
ಮೊದಲಾದುವುಗಳಿಂದುಂಟಾಗುವ ದೋಷಗಳನ್ನು ತಿಳಿದುಕೊಳ್ಳದೆಯೇ
ಇರುತ್ತಾರೆ. ಹೀಗೆ ಜರಿಗಿಸುವುದು ಅಶಾಸ್ತ್ರೀಯವು.

ಶೈವ, ವೈಷ್ಣವಮತಾವಲಂಬಕರಲ್ಲಿರುವ ಪಂಚಗೋತ್ರವ್ಯತಿರಿಕ್ತಾನ್ಯ
ಗೋತ್ರದವರಿಗೆ ಅರ್ಚಕಪದವಿಗಧಿಕಾರವೇ ಶಾಸ್ತ್ರದಲ್ಲಿ ಹೇಳಿರುವುದಿಲ್ಲ.
ಅಂಥಾ ಅನಧಿಕಾರಿಗಳಾದ ಆಚಾರ್ಯಪದಾಧಿಕಾರವಿಲ್ಲದ ಮಹನೀಯರು
ಗ್ರಾಮಾಂತರಗಳಲ್ಲಿ ರಥಯಾತ್ರಾದಿ ಕರ್ಮಗಳನ್ನು ಪ್ರತಿಸಂವತ್ಸರದಲ್ಲಿಯೂ
ಸ್ವೇಚ್ಛೆಯಾಗಿ ಮಾಡಿಸುತ್ತಲಿರುವರೇ ಇದು ಗ್ರಾಮ ಜನಮಾತ್ರ ರಾಜ

ರಾಷ್ಟ್ರಗಳು ನಶಿಸಲೂ ಮತ್ತು ಮಾಡುವ ಯಾಜ್ಞಿಕರ ವಂಶಗಳು ದಿನಕ್ರಮ ವಾಗಿ ನಷ್ಟವಾಗಲೂ ಮಾರ್ಗವಾಗಿದೆ ಎಂದು ಭಗವಚ್ಛಾಸ್ತ್ರಗಳಲ್ಲಿ ಹೇಳಿರುತ್ತದೆ.

ತಮ್ಮ ತಮ್ಮ ಪಿತೃಪಿತಾಮಹಾದಿ ವಂಶಪರಂಪರೆಯಾಗಿ ಆರ್ತ್ವಿಕಪದಾಧಿಕಾರವನ್ನು ಮಾತ್ರ ಹೊಂದಿ ಕೇವಲ ಪೂಜಕರಾಗಿಯೇ ಇರುವವರೆಲ್ಲರೂ ಪ್ರಕೃತಿದಲ್ಲಿ ರಥೋತ್ಸವಾದಿ ಕರ್ಮಗಳನ್ನು ಮಾಡಿಸಲು ಉದ್ಯುಕ್ತರಾಗಿರುತ್ತಾರೆ. ಇವರು ಆಚಾರ್ಯಪದಾಧಿಕಾರಕ್ಕೆ ಅನಧಿಕಾರಿಗಳು. ಆರ್ತ್ವಿಕರಾಗಿಯೇ ಇರುವವರು ನೈಮಿತ್ತಿಕ ಕಾಮ್ಯಕರ್ಮಗಳನ್ನು ಮಾಡಿಸಕೂಡದೆಂದು ಶಾಸ್ತ್ರವಾದವು. ಬಂದುವೇಳೆ ಮಾಡಿಸಿದರೆ ರಾಜ ರಾಷ್ಟ್ರಗಳಿಗೆ ಹಾನಿಕರವು. ಪೌರೋಹಿತ ಮೊದಲಾದ ವೃತ್ತಿಗಳಿಂದ ಜೀವನಮಾಡುತಲಿರುವವರಲ್ಲಿ ಕೆಲವರು ವಂಶ ಪರಂಪರೆಯಾಗಿ ಇದುವರಗೂ ಪ್ರವೇಶಿಸದ ದೈವಿಕಕರ್ಮಗಳಲ್ಲಿ ಕಲಿಮಹಾ ಪುರುಷನ ಪ್ರಭಾವದಿಂದಲೋ ! ಅಥವಾ ಜೀವನೋಪಾಯಕ್ಕೆ ಸುಖಕರವಾ ದುದೆಂಬ ಆಶೆಯಿಂದಲೋ ಕೇವಲ ಉದರನಿಮಿತ್ತವಾಗಿ ತಮ್ಮತಮ್ಮ ಗೃಹ ಸ್ಥರಲ್ಲಿ ಹೇಳಿಕೊಳ್ಳುತ್ತಾ ತಮಗೆ ಲೇಶಾಂಶವೂ ಅಧಿಕಾರವಿಲ್ಲದ ಪರಾರ್ಥಪೂ ಜೆಯಲ್ಲಿ ಈಗ ಅಲ್ಲಲ್ಲಿ ಕೆಲವರು ಪ್ರವೇಶಿಸಲು ಪ್ರಯತ್ನಗಳನ್ನು ಮಾಡುತ್ತ ಲಿದ್ದಾರೆ. ಇವರ ವಂಶಗಳಲ್ಲಿ ಪೂರ್ವದಿಂದ ಇದುವರೆಗೂ ಯಾರಿಗೂ ದೀಕ್ಷಾ ಸಂಸ್ಕಾರಗಳಿಲ್ಲ. ಆರ್ತ್ವಿಕಪದಾಧಿಕಾರವು ಆಚಾರ್ಯಪದಾಧಿಕಾರವು, ಸ್ಥಾಪನಾ ಧಿಕಾರವು, ಪೂರ್ವದಾರಭ್ಯ ಇದುವರೆಗೂ ಇಲ್ಲವಾದುದರಿಂದ ಇವರು ಅದೀಕ್ಷಿ ತರು. ತಾಂತ್ರಿಕಮತಾನುಷ್ಠಾನಪರರಲ್ಲ. ಅದೀಕ್ಷಿತರು ಪರಾರ್ಥ ದೇವಬಿಂಬ ಗಳನ್ನು ಮುಟ್ಟಿದಮಾತ್ರದಿಂದಲೇ ದೇವಲಕತ್ವದೋಷವನ್ನು ಹೊಂದುವರು. ದೇವಲಕನು ದೈವಕರ್ಮ, ಪಿತೃಕರ್ಮಗಳಿಗೂ, ಪಾಂಕ್ತೇಯತ್ವಕ್ಕೂ ಅನರ್ಹನು. ಕೇವಲ ಬಿಂಬಸ್ಪರ್ಶನದಿಂದಲೇ ಇಂತಹ ದೋಷಗಳುಂಟಾಗುವುವು.

ಅಂಥವರು ದೇವತಾಸಂಬಂಧವಾದ ಪ್ರತಿಷ್ಠೆಯೆಂಬ ಹೆಸರುಳ್ಳ ಉದ್ಯಾಪನ, ಉತ್ಸವವೆಂಬ ಯಾತ್ರೆ ಪೂಜೆ ಎಂಬ ಹೆಸರುಳ್ಳ ಒಲಿ ಇವೇ ಮೊದಲಾದ ಕರ್ಮಗಳನ್ನು ಮಾಡಿದರೆ ಮಾಡುವನನಿಗೂ, ಮಾಡಿಸಿದವನಿಗೂ, ಧ್ರುವ ರಾಜ ರಾಷ್ಟ್ರಗಳಿಗೂ ಸ್ವಲ್ಪವಾದರೂ ಕ್ಷೇಮವುಂಟಾಗಲಾರದು. ಇಂತಹ ದೇವಲಕರು ಗೌರ್ನಮೆಂಟ್ ದೇವಾಲಯಗಳೊಳಗೆ ಒಂದೆರಡು ಘಟಿಕೆಗಳಲ್ಲಿ ಅಜ್ಞಾನಾಂಧಕಾರದೊಳಗೆ ಸೇರಿ ಮುಕ್ತಿಪ್ರಕಾಶವನ್ನೇ ತಿರಿದಿಂದ

(ಮತವೆಂಬ ಸ್ವಾರ್ಥದಲ್ಲಿ ಆವೇಶಿಸಿದವರಿಂದ) ಪ್ರೋತ್ಸಾಹಿಸಲ್ಪಟ್ಟು ಮೇಲೆ ಹೇಳಿದ ಕಾರ್ಯಗಳಿಗೆ ಪ್ರವೇಶಿಸಿ ಪ್ರತಿಷ್ಠಾ ಕರ್ಮಗಳನ್ನು ಮಾಡಿ ಅರ್ಚನಾದಿಗಳನ್ನು ಮಾಡುತ್ತಾ ಗೋಮುಖವ್ಯಾಘ್ರದಂತೆ ರಾಜ ರಾಷ್ಟ್ರಗಳಿಗೆ ಶ್ರೇಯೋಭಿವೃದ್ಧಿಯನ್ನು ಕೋರುತ್ತಲಿದಾರೆ. ದೇವಲಕರು ಆಶೀರ್ವಾದಮಾಡಲು ಎಂದಿಗೂ ಅಧಿಕಾರವಿಲ್ಲ. ಇವರು ದಾರ್ಶ್ರಾಹ್ಮಣರಂತಲೂ ಪತಿತರೆಂತಲೂ ಭಗವಚ್ಛಾಸ್ತ್ರದಲ್ಲಿಯೂ, ಸ್ಮೃತಿಪುರಾಣೇತಿಹಾಸಗಳಲ್ಲಿಯೂ ಹೇಳಲ್ಪಟ್ಟಿರುತ್ತೆ.

ಆನಧಿಕಾರರು ಪ್ರತಿಷ್ಠಿಸಿ ಪೂಜಿಸುವ ದೇವಾಲಯಗಳಲ್ಲಿ ದ್ವಿಜೇತರೆಲ್ಲರೂ ಪ್ರವೇಶಿಸಿ, ತಾವಾಗಿಯೇ ಪೂಜಿಸಬಹುದೆಂದೂ ಇಂತಹ ದೇವಾಲಯಗಳಲ್ಲಿ ದೀಕ್ಷಾನಿಯಮವು, ಶಾಸ್ತ್ರನಿಯನವು, ಅರ್ಚಕನಿಯಮವು ಮೊದಲಾದುವು ಇಲ್ಲವೆಂದೂ, ಈ ಆಲಯಗಳಲ್ಲಿ ಅಧಿಕಾರರಂತೆ ದೀಕ್ಷಾನಿಯನು, ಅರ್ಚಕನಿಯಮಗಳನ್ನು ಯಾರು ಕಲ್ಪಿಸಿಕೊಂಡು ಆಚರಿಸುತ್ತಲಿದ್ದಾರೆಯೋ ಅಂಥವರನ್ನು ದುರ್ಬಗೆ ೀತ್ಪನ್ನರೆಂದು ಸತ್ಯವಾಗಿ ತಿಳಿಯಬೇಕೆಂದೂ, ಇಂತಹ ಜನಗಳಿಗೂ ಆಲಯಕ್ಕೂ ಗ್ರಾಮಕ್ಕೂ, ರಾಜ ರಾಷ್ಟ್ರಗಳಿಗೂ ಸಹ ದೋಷಗಳುಂಟಾ ಗುತ್ತದೆಂದೂ ಸ್ಮೃತಿಗಳಲ್ಲಿ ಘಂಟಾಘೋಷವಾಗಿ ಹೇಳಿರುತ್ತೆ. ಅಲ್ಲದೆ ಅದೀಕ್ಷಿತರಾದ ವೈದಿಕರು ಆರಾಧಿಸುವ ದೇವಾಲಯಕ್ಕೆ ಯಾವ ರಾಜಾಧಿರಾಜರು, ಯಾವ ಸಾಮಂತರಾಜರು, ಯಾವ ಭಗವದ್ಭಕ್ತರು, ಗ್ರಾಮಗಳು, ಭೂಮಿಗಳು, ದ್ರವ್ಯರೂಪವಾಗಿ ವೇತನಗಳು ಮೊದಲಾದವನ್ನು ಕೊಡಕೂಡದೆಂದೂ, ತಿಳಿಯದೆ ಕೊಟ್ಟರುವಂಥಾದ್ದನ್ನು ತಿರಿಗಿ ಹಿಂದಕ್ಕೆ ತೆಗೆದುಕೊಂಡು ಶಾಸ್ತ್ರಸಿದ್ಧವಾದ ದೇವಾಲಯಗಳಿಗೆ ಆ ಧರ್ಮವನ್ನು ವಿನಿಯೋಗಿಸಬೇಕೆಂದೂ, ತಿಳಿದೂ ಉದಾಸೀನದಿಂದ ಗ್ರಾಮ ಭೂಮಿಗಳನ್ನು ಹಿಂದಿರುಗಿಸಿ ಯುಕ್ತಸ್ಥಲಕ್ಕೆ ಕೊಡದೆ ಹೋದರೆ ಬಹಳ ದೋಷಗಳುಂಟಾಗುತ್ತದೆಂದೂ, ಈ ಸ್ಥಳಗಳಲ್ಲಿ ದತ್ತಾಪಹಾರದೋಷವುಂಟಾಗುವುದಿಲ್ಲವೆಂದೂ ಭಗವಚ್ಛಾಸ್ತ್ರವು ಉದ್ಘೋಷಿಸುತ್ತಲಿದೆ. ಆದುದರಿಂದ ಈಗ ಅದೀಕ್ಷಿತರು ದೈವಕರ್ಮಗಳಲ್ಲಿ ಪ್ರವರ್ತಿಸಿರುವುದು ಶಾಸ್ತ್ರಗಳಿಗೂ ಅವರ ಮತಸಿದ್ಧಾಂತಕ್ಕೂ ಶಿಷ್ಟಾಚಾರಕ್ಕೂ ಬಹಳ ವಿರೋಧವು. ಇವರು ಪ್ರತಿಷ್ಠಿಸಿದ ಮೂರ್ತಿಗಳನ್ನು ಇತರ ವರ್ಣದವರು ಮುಟ್ಟಕೂಡದೆಂದು ಯಾವ ಸ್ಮೃತಿಗಳಲ್ಲಿಯೂ, ಯಾವ ಕಲ್ಪಸೂತ್ರಗಳಲ್ಲಿಯೂ ಹೇಳಿರುವುದಿಲ್ಲ. ದೇವಲ

ಕರಿಂದುಂಟಾಗುವ ದೋಷಗಳು ಇತರ ಮತಸ್ಥರು ಪ್ರವೇಶಿಸಿ ತಾವೇ ಪೂಜೆ ಸುವುದರಿಂದ ಸ್ವಲ್ಪವಾಗಿ ಶಾಂತತೆಯನ್ನು ಹೊಂದುವುದು. ಪ್ರಕೃತದಲ್ಲಿ ವೈದಿಕವಿಧಿಯಿಂದ ಪ್ರತಿಷ್ಠಿಸಲ್ಪಡುತ್ತಿರುವ ಅಶ್ವತ್ಥ, ನಾಗಬಿಂಬಗಳನ್ನು ವರ್ಣಭೇದವಿಲ್ಲದೆ ಸಮಸ್ತ ಜನರೂ ಪೂಜಿಸುತ್ತಿರುವುದು ಈಗ ಪ್ರತ್ಯಕ್ಷದಲ್ಲಿಯೇ ತಿಳಿಯಬರುತ್ತಿದೆ.

ಯಜಮಾನರಾದ ಧರ್ಮಕರ್ತರು, ರಾಜರು, ಸಾವಂತರಿಂದಲೂ ಮೊದಲಾದ ಧರ್ಮಪ್ರಭುಗಳು ಇಂತಹ ದುರಾಚಾರವನ್ನು ಮನಸ್ಸಿಗೆ ತಂದು, ಕರ್ಮಗಳನ್ನು ಮಾಡಿಸುತ್ತಿರುವುದು ಬಹಳ ವಿಷಾದವಾದುದು! ಅನಾಚಾರ್ಯನಾದ ದೇವಲಕನಿಂದ ಪ್ರತಿಷ್ಠಿಸಲ್ಪಟ್ಟ ಲಿಂಗ ಬಿಂಬಗಳನ್ನು ತಿಳಿದ ತಕ್ಷಣವೇ ಕೀಳಿಸಿ, ಭಗವಚ್ಛಾಸ್ತ್ರೋಕ್ತರೀತಿಯಾಗಿ ಆಚಾರಾಧಿಕಾರವನ್ನು ಹೊಂದಿರುವವರಿಂದ ಆ ದೋಷಪರಿಹಾರಾರ್ಥವಾಗಿ ಶಾಂತಿಮಾಡಿಸಿ, ಅನಂತರ ವಿಧ್ಯುಕ್ತವಾಗಿ ಪ್ರತಿಷ್ಠೆಯನ್ನು ಮಾಡಿಸಿ ಅರ್ಚಕಪದಾಧಿಕಾರವುಳ್ಳವರಿಂದ ಪೂಜಾಕರ್ಮವನ್ನು ಮಾಡಿಸಬೇಕು. ಹಾಗಿಲ್ಲದಿದ್ದರೆ ಆ ಬಿಂಬಗಳನ್ನು ಸಮುದ್ರದಲ್ಲಿಯಾಗಲಿ, ನದಿಯಲ್ಲಿಯಾಗಲಿ ವಿಸರ್ಜನೆಯನ್ನು ಮಾಡಿ ರಾಜ್ಯರಾಷ್ಟ್ರಾಭಿವೃದ್ಧಿಯಾಗುವುದಕ್ಕೋಸ್ಕರ ವಿಧ್ಯುಕ್ತವಾಗಿ ಶಾಂತಿಯನ್ನು ಮಾಡಿಸಬೇಕು. ಹೀಗೆ ಮಾಡದಿದ್ದರೆ ಆ ಲಿಂಗಪ್ರತಿಮೆಗಳೇ ಶತ್ರುಗಳಾಗಿ ದೇವಲಕನ ಮುಖದಿಂದ ಹೊರಡುವ ಮಂತ್ರಗಳಲ್ಲಿನ ಪ್ರತಿಯೊಂದು ವರ್ಣವೂ ಶಸ್ತ್ರವಾಗಿ ಅವನ ಆಶೀರ್ವಾದಗಳೇ ಶಾಪಗಳಾಗಿ ಹೇಳಲಶಕ್ಯವಾದ ದುಷ್ಫಲವನ್ನು ಕೊಡುವುದೆಂದು ಶಾಸ್ತ್ರಗಳಲ್ಲಿ ವಿಪುಲವಾಗಿ ಹೇಳಲ್ಪಟ್ಟಿದೆ.

ಪ್ರಮಾದವಶದಿಂದ ಅನನುಕೂಲವಾದರೆ ಕೆಲವು ದಿನಗಳು ಮಾತ್ರ ಪೂಜೆ ನಿಲ್ಲದೆ ಇರುವುದಕ್ಕೋಸ್ಕರ ಅನಧಿಕಾರಿಗಳಾದ ಅದೀಕ್ಷಿತರು ಅಧಿಕಾರಿಗಳಿಂದ ದೀಕ್ಷೆಯನ್ನು ಹೊಂದಿ ಪರಾರ್ಥ ದೇವಾಲಯಗಳಲ್ಲಿ ಧ್ರುವಬೇರಕ್ಕೆ ಪೂಜೆಯನ್ನು ಮಾಡಬಹುದೇ ಹೊರತು ಆ ಆಲಯಗಳಲ್ಲಿರುವ ಉತ್ಸವ ಬೇರಗಳಿಗೆ ಇವರು ಅರ್ಚನೆಯನ್ನು ಮಾಡಕೂಡದು. ಅಧಿಕಾರರೇ ಮಾಡಬೇಕು. ಅಧಿಕಾರರಿಲ್ಲದಿದ್ದಲ್ಲಿ ಈ ಉತ್ಸವಮೂರ್ತಿಗಳನ್ನು ಅಧಿಕಾರಿಗಳಾರಾಧಿಸುತ್ತಲಿರುವ ದೇವಾಲಯಗಳಿಗೆ ಕಳುಹಿಸಿ ಅಲ್ಲಿಯೇ ಆರಾಧನೆಯನ್ನು ನಡೆಸಬೇಕು. ಉತ್ಸವಕಾಲದಲ್ಲಿ ಮಾತ್ರ ಯಾವ ಮೂರ್ತಿಗಳು ಯಾವ ಆಲಯಕ್ಕೆ ಸೇರಿರುತ್ತೆದೆಯೋ ಆ ಆಲಯಕ್ಕೆ ಬಿಂಬಶುದ್ಧಿಯನ್ನು ತೆಗೆದುಕೊಂಡು

ಹೋಗಿ ಅಲ್ಲಿಯೇ ಉತ್ಸವಕಾರ್ಯವನ್ನು ಅಧಿಕಾರದ ಕೈಯಲ್ಲಿ ಮಾಡಿಸಬೇಕು, ಇದಕ್ಕೆ ವ್ಯತಿರಿಕ್ತವಾಗಿ ಧರ್ಮಾಧಿಕಾರಿಯೇ ಮೊದಲಾದವರು ಮಾಡಿಸಿದರೆ ರಾಜ ರಾಷ್ಟ್ರಕ್ಕೆ ಅಶ್ರೇಯಸ್ಸುಂಟಾಗುತ್ತೆಂದು ಹೇಳಿರುತ್ತೆ.

ಘಾಟೀಸುಬ್ರಹ್ಮಣ್ಯ, ವಿದುರಾಶ್ವತ್ಥ, ಹರಿಹರ ಇವೇ ಮೊದಲಾದ ಕೆಲವು ಸ್ಥಳಗಳಲ್ಲಿ ಈಚಿಗೆ ಕೇವಲ ಅನಧಿಕಾರಿಗಳಾದ ಅದೀಕ್ಷಿತರು ರಥೋತ್ಸವಾದಿ ಕರ್ಮಗಳನ್ನು ಮಾಡಿಸುತ್ತಲಿದ್ದಾರೆ. ಇದು ಅವಿಚಾರವಾದುದು ಶಾಸ್ತ್ರೀಯವಾಗಿರುವುದಿಲ್ಲ. ಇದರಿಂದ ಅನೇಕ ಅನರ್ಥಗಳುಂಟಾಗುತ್ತೆಂದು ಭಗವಚ್ಛಾಸ್ತ್ರದಲ್ಲಿ ಹೇಳಿರುತ್ತವೆ. ಅದೀಕ್ಷಿತರು ಮೇಲ್ಕಂಡ ಸ್ಥಳಗಳಲ್ಲಿ ಪ್ರಕೃತದಲ್ಲಿ ಅರ್ಚಕರಾಗಿದ್ದರೂ ಶೈವ, ಪಂಚರಾತ್ರ ವಿಖನಸಾಗಮಗಳ ಪೈಕಿ ಯಾವುದಾದರೊಂದಾಗಮರೀತಿಯಾಗಿ ಉತ್ಸವ ಕರ್ಮವನ್ನು ಅಗಮಜ್ಞರಾದ ದೀಕ್ಷಿತರ ಪೈಕಿ ಯಾರಿಂದಲಾದರೂ ಮಾಡಿಸುವುದು ಶಾಸ್ತ್ರೀಯವಾಗಿರುತ್ತದೆ. ದೋಷಗಳಿಗೆ ಕಾರಣವಾಗಿರುವುದಿಲ್ಲ. ಅದೀಕ್ಷಿತರು ಪೂಜಿಸುತ್ತಿರುವ ಸ್ಥಳಗಳಲ್ಲಿ ದೀಕ್ಷಾನ್ವಿತರಾದ ಬ್ರಾಹ್ಮಣರು ಪ್ರವೇಶಿಸಿ ಆಗಮರೀತಿಯಾಗಿ ಮಾಡಕೂಡದೆಂದು ಯಾವ ಸ್ಮೃತಿಗಳಲ್ಲಿಯೂ ಹೇಳಿರುವುದಿಲ್ಲ. ಯಡತೊರೆ, ರಾಮನಾಥಪುರ, ಕೋಣನೂರು, ಕನ್ನಂಬಾಡಿ ಮುಂತಾದ ಸ್ಥಳಗಳಲ್ಲಿರುವ ಶಿವಾಲಯಗಳಲ್ಲಿ ಅದೀಕ್ಷಿತರಾದ ಬ್ರಾಹ್ಮಣರೇ ಪ್ರಕೃತದಲ್ಲಿ ಅರ್ಚಕರಾಗಿರುತ್ತಾರೆ. ಆಯಾ ಸ್ಥಳಗಳಲ್ಲಿ ಬ್ರಹ್ಮೋತ್ಸವಾದಿ ಸಮಸ್ತ ಕರ್ಮಗಳನ್ನೂ ನಂಜನಗೂಡು ಆಗಮಿಕರು, ಚಾಮುಂಡಿಬೆಟ್ಟದ ಆಗಮಿಕರುಗಳೇ ಶೈವಾಗಮೋಕ್ತವಾಗಿ ಮಾಡಿಸುತ್ತಲಿದ್ದಾರೆ. ಆದುದರಿಂದ ಈ ಮೇಲ್ಕಂಡ ಸ್ಥಳಗಳಲ್ಲಿಯೂ ಹಾಗೆಯೇ ನಡೆಸುವುದುತ್ತಮವಾಗಿಯೂ ಶಾಸ್ತ್ರೀಯವಾಗಿಯೂ ಇರುತ್ತದೆ. ವೈದಿಕವಿಧಿಯಲ್ಲಿ ಯಾವ ಸೂತ್ರಕಾರರೂ ಉತ್ಸವ ವಿಧಿಯನ್ನು ಹೇಳಿರುವುದಿಲ್ಲಾ. ಪ್ರಕೃತದಲ್ಲಿ ಮೇಲ್ಕಂಡ ಸ್ಥಲಗಳಲ್ಲಿ ಅದೀಕ್ಷಿತರು ನಡೆಸುವುದು ಶೈವಾಗಮದಿಂದಲೇ! ನಃಚಾ ವೈದಿಕವೆಂದು ಹೇಳುವರು. ವೈದಿಕವಿಧಿಯಲ್ಲಿ ಉತ್ಸವಕರ್ಮವನ್ನು ಹೇಳಿದ್ದರೆ ಶ್ರೀ ಶೃಂಗೇರಿ ಜಗದ್ಗುರು ಶ್ರೀಮಠದಲ್ಲಿ ಶ್ರೀ ಶಾರದಾದೇವಿಯವರ ದೇವಾಲಯದಲ್ಲಿಯೂ, ಶ್ರೀ ವಿದ್ಯಾಶಂಕರಸ್ವಾಮಿ ದೇವಾಲಯದಲ್ಲಿಯೂ ವೈದಿಕವಿಧಿಯನ್ನೇ ಪರಿಗ್ರಹಿಸುತ್ತಿದ್ದರು ವೈದಿಕವಿಧಿಯಲ್ಲಿ ಹೇಳದಿರುವುದರಿಂದಲೇ ಅಂತಹ ಸ್ಥಳಗಳಲ್ಲಿ ಶೈವಾಗಮೋಕ್ತವಾತುಲ ತಂತ್ರರೀತಿಯಾಗಿ ದೀಕ್ಷಾನ್ವಿತರಾದ ಬ್ರಾಹ್ಮಣ

ರಿಂಭ ಮಾಡಿಸುತ್ತಿರುವುದು ಪ್ರತ್ಯಕ್ಷಾನುಭವದಲ್ಲಿರುತ್ತದೆ. ಪ್ರಕೃತದಲ್ಲಿ ಶೈವ ವೈಷ್ಣವ ದೀಕ್ಷಾನ್ವಿತರಾದ ದ್ವಿಜೇತರರು ಪೂಜಿಸುತ್ತಿರುವ ದೇವಾಲಯಗಳಲ್ಲಿನ ವಿಗ್ರಹಗಳು ಯಾವ ಅಗಮಕ್ಕೂ ಸೇರಿರುವುದಿಲ್ಲ ಮತ್ತು ವೈದಿಕ ವಾದದ್ದೂ ಅಲ್ಲ. ಇಂಥಾ ಅವೈದಿಕ ದೇವಾಲಯಗಳಲ್ಲಿ ವೈದಿಕರು ಪ್ರವೇಶಿಸಿ ಅಗಮೋಕ್ತವಾಗಿ ಉತ್ಸವಾದಿ ಕರ್ಮಗಳನ್ನು ಮಾಡಬಹುದೆಂದು ಭಗವಚ್ಛಾಸ್ತ್ರಗಳ ಸ್ಪೃಶಿ ಯಾವ ಶಾಸ್ತ್ರದಲ್ಲಿಯೂ ಹೇಳಿರುವುದಿಲ್ಲ. ಅವೈದಿಕರು ಆರಾಧಿಸತಕ್ಕ ಮೂರ್ತಿಗಳಿಗೆ ಅಗಮೋಕ್ತವಾಗಿ ಪ್ರತಿಷ್ಠೆಯು ಹೇಳಿರುವುದಿಲ್ಲ. ಆ ದೇವಾಲಯಗಳಲ್ಲಿ ಪ್ರವೇಶಿಸುವುದು ಅವಿಚಾರವು. ಪ್ರವೇಶಿಸಿ ಕರ್ಮವನ್ನುಮಾಡುವವರಿಗೆ ದ್ವಿಜತ್ವವಿರುವುದಿಲ್ಲವೆಂದೂ ರಾಜ ರಾಷ್ಟ್ರಾದಿಗಳಿಗೆ ಹಾನಿಕರವೆಂದೂ ಭಗವಚ್ಛಾಸ್ತ್ರಗಳಲ್ಲಿ ಉದ್ಘೋಷಿಸುತ್ತಲಿವೆ.

ಶೈವ ವೈಷ್ಣವ ದೀಕ್ಷೆಯನ್ನು ಹೊಂದಿರುವ ಬ್ರಾಹ್ಮಣೇತರರಿಗೆ ಯಾಜಕಾಧಿಕಾರವು ಶುದ್ಧಾಂಗವಾಗಿರುವುದಿಲ್ಲ. ಆದುದರಿಂದ ಈ ಉಭಯತ್ರರೂ ಸ್ವತಃ ಅಧ್ವರ್ಯರಾಗಿ ನಿಂತು ದೈವಿಕ ಸಂಬಂಧವಾದ ಪೂಜಾಕರ್ಮವನ್ನು ವಿನಹ ಯಾವ ಇತರ ಕರ್ಮಗಳನ್ನೂ ಮಾಡಕೂಡದು. ಡಂಬ, ಮೋಹಾದಿಗಳಿಂದ ಆಲಯಗಳಲ್ಲಿ ಪ್ರಷಿಷ್ಠೆ, ಯಾತ್ರೆ ಎಂಬ ಉದ್ಯಾಪನೋತ್ಸವ ಕರ್ಮಗಳನ್ನು ಮಾಡಿದರೆ ರಾಜ ರಾಷ್ಟ್ರಗಳಿಗೆ ದೋಷಗಳು ಸಂಭವಿಸುವುದಲ್ಲದೆ, ಅವರಿಗೂ ಯಜಮಾನರಿಗೂ ವಂಶನಾಶವಾಗುವುದೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ.

ಆದುದರಿಂದ ಉಭಯಮತೀಯರೂ ತಮ್ಮ ತಮ್ಮ ಆಲಯಗಳಲ್ಲಿ ಅಧಿಕಾರರನ್ನು ಮಂತ್ರಪಾಠಕರನ್ನಾಗಿಟ್ಟುಕೊಂಡು ತಾವೇ ಕರ್ಮಗಳನ್ನು ಮಾಡುವುದು ಶ್ರೇಯಸ್ಕರವಾಗಿಯೂ ಶಾಸ್ತ್ರೀಯವಾಗಿಯೂ ಇರುತ್ತದೆ. ಪ್ರಕೃತದಲ್ಲಿ ಅಧಿಕಾರರೂ ಅನಧಿಕಾರರೂ ಮೇಲ್ಕಂಡಂತೆ ನಡಿಸದೆ ಸ್ವೇಚ್ಛೆಯಾಗಿ ನಡೆಸುತ್ತಲಿದಾರೆ. ಇದು ಅವಿಚಾರಣೀಯವಾದುದು.

ಶೈವಾಗಮದಿಂದ ನಡೆಯುತ್ತಿರುವ ಸ್ಥಳವು ಆಗಮಾತಿರಿಕ್ತಮಾರ್ಗಕ್ಕೆ ಬದಲಾಯಿಸಿಕೊಳ್ಳಲು ಯಾವ ಧರ್ಮಶಾಸ್ತ್ರಗಳಲ್ಲಿಯೂ ಪ್ರಮಾಣವಚನಗಳಿರುವುದಿಲ್ಲ. ಪೂರ್ವದಲ್ಲಿ ಮೂಲಬಿಂಬವು ಯಾವ ಆಗಮರೀತಿಯಾಗಿ ಪ್ರತಿಷ್ಠಿತವಾಗಿರುತ್ತದೆಯೋ ಆ ಆಗಮರೀತಿಯಾಗಿ ಪೂಜಾದಿ ಸಮಸ್ತ ಕರ್ಮಗಳನ್ನೂ ನಡೆಸಬೇಕೇ ಹೊರತು ಆಗಮವನ್ನು ಬದಲಾಯಿಸಲು ಭಗವ

ಟ್ಟಾಸ್ತ್ರಗಳಲ್ಲಿ ಆಧಾರವಿಲ್ಲ ಪ್ರಮಾದವಶದಿಂದ ಆಗಮವನ್ನು ಬದಲಾಯಿಸಿದರೆ ರಾಜ ರಾಷ್ಟ್ರ ಗ್ರಾಮ ಯಜಮಾನ ಅರ್ಚಕ ಮುಂತಾದವರಿಗೆ ದೋಷಗಳು ಪ್ರಾಪ್ತವಾಗುತ್ತೆಂದು ಭಗವಚ್ಛಾಸ್ತ್ರಗಳಲ್ಲಿ ಘಂಟಾಘೋಷವಾಗಿ ಹೇಳಿರುತ್ತೆ. ಮತ್ತು ಮೂಲಬಿಂಬವು ಯಾವ ಆಗಮರೀತಿಯಾಗಿ ಪ್ರತಿಷ್ಠಿಸಿ ಪೂಜಾದಿ ಕಾರ್ಯಗಳು ನಡೆಯುತ್ತಲಿದೆಯೋ ಆದೇ ಆಗಮರೀತಿಯಾಗಿ ಆ ಆಲಯದಲ್ಲಿ ಪರಿವಾರದೇವತೆಗಳನ್ನು ಪ್ರತಿಷ್ಠಿಸಬೇಕೆಂದು ಹೇಳಿರುತ್ತೆ. ಆ ಆಲಯದಯಲ್ಲಿ ಅನ್ಯಮಾರ್ಗದಿಂದ ಯಾವ ಬಿಂಬಪ್ರತಿಷ್ಠೆಯನ್ನು ಮಾಡಲೂ ಅಧಾರವಿರುವುದಿಲ್ಲ.

ಪೂರ್ವದಿಂದಲೂ ಬಂದಿರುವ ಸಂಪ್ರದಾಯವನ್ನು ಬದಲಾಯಿಸಬೇಕೆಂದು ಕೆಲವರು ಮಹನೀಯರು ಈಗೀಗ ಪ್ರಯತ್ನಪಡುತ್ತಲಿದ್ದಾರೆ. ಇದು ಧರ್ಮಕ್ಕೆ ಕೇವಲ ವಿರುದ್ಧವಾಗಿರುತ್ತೆ.

ವಿಶ್ವವೈದಿಕ ಸಿದ್ಧಾಂತರು ಸಾಕ್ಷಾದ್ಭಗವತ್ಪ್ರಣೀತವಾದ ವಾಕ್ಯಗಳಿಂದ ಯಾವ ದೇವಾಲಯದಲ್ಲಿಯೂ ಮಾಡಕೂಡದು. ಇವರು ಸ್ವಯಂವ್ಯಕ್ತ ರೂಪ, ಸ್ಥಾಪನರೂಪಾಲಯಗಳಲ್ಲಿ ಋಷಿವಾಕ್ಯಗಳಿಂದಲೇ ಮಾಡಬೇಕು. ಅನ್ಯಮುನಿವಾಕ್ಯಗಳಿಗಿಂತಲೂ ಆಗಮಶಾಸ್ತ್ರದಲ್ಲಿ ಸಾಕ್ಷಾತ್ ಭಗವಂತನಿಂದ ದೀಕ್ಷೆಯನ್ನು ಹೊಂದಿ ಯಾವ ಯಾವ ಋಷೀಶ್ವರರಿರುವರೋ ಆಯಾಯ ಋಷೀಶ್ವರರ ವಾಕ್ಯಗಳು ತತ್ಸಂತತಿಯವರಿಗೆ ಶ್ರೇಷ್ಠಂತರವು. ಅಧಿಕಾರರು ವಿರಳವಾಗಿರುವುದರಿಂದ ಪ್ರಕೃತದಲ್ಲಿ ಇವರೇ ಅಧಿಕಾರಿಗಳು. ಆ ವಾಕ್ಯಗೆಳನ್ನು ತ್ಯಜಿಸಿದರೆ ಇಹವರಗೆಳಲ್ಲಿ ಆ ಗೋತ್ರದವರಿಗೆ ಅನರ್ಥಗಳುಂಟಾಗುವುದಲ್ಲದೆ ತಂದೆ ತಾತಂದರ ಗೋತ್ರದ ಮೂಲಪುರುಷರಿಗೆ ಅವಮಾನವನ್ನುಂಟುಮಾಡಿದಂಥಾವರಾಗಿ ಅಂಧತಮಸ್ಸೆಂಬ ನರಕವನ್ನು ಸದಾ ಅನುಭವಿಸಬೇಕಾಗಿರುವುದು.

ಈ ಶೈವ ವೈಷ್ಣವ ಪಂಚ ಬ್ರಹ್ಮರ್ಷಿಗಳ ವಾಕ್ಯಗಳನ್ನು ತ್ಯಜಿಸುವ ತತ್ಸಂತತಿಯವರಾದ ವಿಶ್ವಾಧಿಕಾರಿ ವೈದಿಕಮಾರ್ಗಾಧಿಕಾರಿಗಳಿಗೆ ಬೇರೆ ಗೋತ್ರದಲ್ಲಿ ಜನಿಸಿದವರೆಂದೂ ಶಾಖಾರಂಡರೆಂದೂ ಪತಿತೋತ್ಪತಿತರೆಂದೂ ಮೊದಲಾದ ಅನೇಕ ದೋಷಗಳುಂಟಾಗುವುವು. ಈ ವಿಷಯದಲ್ಲಿ ಸಂಶಯವಿಲ್ಲ. ಆದುದರಿಂದ ಇಂತಹ ದೋಷಗಳಿಗೆ ಪಾತ್ರರಾಗದೆ ಇರುವವರು ದೈವಿಕ ಕರ್ಮಗಳನ್ನು ಮಾಡಬೇಕು. ಮೇಲ್ಕಂಡ ದೋಷಗಳಿಂದನ್ವಿತರಾದ

ವರಿಗೆ ಪ್ರಾಯಶ್ಚಿತ್ತವೇ ಇರುವುದಿಲ್ಲ. ಆದುದರಿಂದ ಅಂಥವರು ದೈವಕರ್ಮವನ್ನು ಮಾಡಕೂಡದು. ಮಾಡಿದ್ದೇ ಆದರೆ ರಾಜ ರಾಷ್ಟ್ರ ಯಜಮಾನರಿಗೆ ತೊಂದರೆಯಾಗುವುದು.

ದ್ರವಿಡ, ಪಾಂಡ್ಯ, ಚೋಳ, ಕೇರಳ, ಕರ್ಣಾಟ, ಆಂಧ್ರ ಮೊದಲಾದ ೫೬ ದೇಶಗಳಲ್ಲಿರುವ ದೇವಾಲಯಗಳು ಆಯಾಯ ದೇಶಾಧಿಪತಿಗಳಿಗೆ ಪ್ರತ್ಯಕ್ಷತದಲ್ಲಿ ಸೇರಿರುವುದರಿಂದಲೂ, ಮತ್ತು ಅಯಾ ದೇಶಾಧೀಶ್ವರರ ಪೂರ್ವಿಕರೇ ಆಲಯ ನಿರ್ಮಾಣ ಪ್ರತಿಷ್ಠಾದಿ ಕರ್ಮಗಳನ್ನು ಮಾಡಿಸಿ ಪೂಜೆಗೆ ಯಾವ ವಿಧವಾದ ತೊಂದರೆಯೂ ಇಲ್ಲದಂತೆ ಏರ್ಪಡಿಸಿರುವುದರಿಂದಲೂ, ಆಯಾಯ ದೇಶದ ರಾಜರೇ ಅವುಗಳಿಗೆ ಕರ್ತರಾಗಿದ್ದುಕೊಂಡು ತಾವು ಪೂಜಿಸಲು ಅನುಕೂಲವಿಲ್ಲದಿದ್ದುದರಿಂದಲೂ ತಮಗೆ ಪ್ರತಿನಿಧಿಗಳಾಗಿ ಅರ್ಚಕರನ್ನು ನೇಮಿಸಿರುತ್ತಾರೆ. ಆಯಾಯ ದೇಶಾಧೀಶ್ವರರ ಗೋತ್ರಋಷಿಗಳ ವಾಕ್ಯಗಳಿಂದಲೇ ಆಗಲೀ ಆಥವಾ ಆಗೋತ್ರಋಷಿಗಳಲ್ಲಿ ಯಾರೂ ಹೇಳದಿರುವಲ್ಲಿ ಸೂತ್ರಕಾರರ ವಾಕ್ಯಗಳಿಂದಾಗಲೀ ಈಶಾನ ವಿಷ್ಣು ಬಲಿ ಕರ್ಮವನ್ನೂ ಆಯಾಯ ದೇಶದಲ್ಲಿ ಪ್ರತಿದಿನವೂ ಸಾಯಂಕಾಲದಲ್ಲಿ ಜರಿಗಿಸಬೇಕೆಂದೂ ಹಾಗೆಮಾಡದೆ ಬೇರೆವಿಧವಾಗಿ ಮಾಡಿದರೆ ಅಯಾಯ ದೇಶಾಧೀಶ್ವರರಿಗೂ ದೇಶಗಳಿಗೂಕೂಡ ಹೆಚ್ಚಾದ ದೋಷವುಂಟಾಗುತ್ತದೆಂದೂ, ಉಕ್ತವಲ್ಲದ ರಥ ಯಾತ್ರಾದಿ ಕರ್ಮಗಳನ್ನೂ, ಪ್ರಾತಃಕಾಲಾರ್ಚನೆಯನ್ನೂಮಾತ್ರ ಶೈವ ವೈಷ್ಣವ ಪಂಚ ಬ್ರಹ್ಮರ್ಷಿಗಳ ವಾಕ್ಯಗಳಿಂದಲೇ ಮಾಡಬೇಕೆಂದೂ ಹೇಳಲ್ಪಟ್ಟಿರುತ್ತದೆ. ರಾಜಾಶ್ರಿತ, ಯಜಮಾನಾಶ್ರಿತ ದೇವಾಲಯಗಳಲ್ಲಿ ನಾವುಗಳು ಸ್ವೇಚ್ಛಾನುಸಾರ ಮಾಡಿಸುವುದು ಅಕಾಸ್ತ್ರೀಯವು. ಈ ಆಲಯಗಳು ನಮ್ಮ ಸ್ವಂತ ಮಾದುವುಗಳಲ್ಲ. ಭಗವದ್ವಾಕ್ಯಗಳಿಂದಲೇ ಮಾಡಬೇಕೆಂದು ಹೇಳುವವರೆಲ್ಲರೂ ತಮ್ಮ ತಮ್ಮ ಗೃಹಗಳಲ್ಲಿ ಮಾಡಿಕೊಳ್ಳಬಹುದೇಹೊರತು ರಾಜಾಶ್ರಿತಾಲಯಗಳಲ್ಲಿ ಮಾಡಕೂಡದು. ಹಾಗೆ ಮಾಡುವುದರಿಂದ ಕಾಲಾತಿಕ್ರಮಣ ದೋಷವೂ ಸೂತ್ರಪರಿತ್ಯಾಗ ದೋಷವೂ ಸಹ ಆಯಾಯ ರಾಜರಿಗೆ ಸಂಪೂರ್ಣವಾಗಿ ಪ್ರಾಪ್ತವಾಗುವುದು. ಆದಕಾರಣ ಇಂತಹ ದೋಷಗಳಿಗೆ ಅವಕಾಶಕೊಡದೆ ಆಯಾ ದೇಶಾಧೀಶ್ವರರೂ, ಸಾಮಂತರಾಜರೂ ಅಮಾತ್ಯರೂ ಜಾಗರೂಕರಾಗಿ ವಿಚಾರಿಸಿಕೊಳ್ಳುತ್ತಲಿರಬೇಕು. ಇಲ್ಲದ ಪಕ್ಷದಲ್ಲಿ ಆಯಾಯ ದೇಶಗಳಲ್ಲಿ ಧನ ಧಾನ್ಯ ವಸ್ತು ಸಾಹನಾದಿಗಳು ನಾಶಹೊಂದಲ್ಪಟ್ಟು

ಕಾರಣವಾಗುತ್ತೆ. ನಿಯಂಕರ್ಯಾದಿಗಳು ಅಜ್ಞಾನದಿಂದ ಒಂದುವೇಳೆ ಸಂಭವಿಸಿದರೆ ಆ ದೋಷಪರಿಹರಾರ್ಥವಾಗಿ ಶಾಂತಿ ಹೇಳಲ್ಪಟ್ಟಿರುತ್ತದೆಯೇ ಹೊರತು ಪುನಃಪೂರ್ವಕವಾಗಿ ಮಾಡುವಂತಹ ದೋಷಗಳಿಗೆ ಶಾಸ್ತ್ರದಲ್ಲಿ ಪ್ರಾಯಶ್ಚಿತ್ತವನ್ನೇ ಬರೆದಿರುವುದಿಲ್ಲ. ಆದುದರಿಂದ ಆಯಾಯ ಫಲಗಳನ್ನ ನುಭವಿಸಲೇಬೇಕು.

ರಥಯಾತ್ರೋತ್ಸವವನ್ನು ಸ್ವಯಂವ್ಯಕ್ತರೂಪಸ್ಥಲದಲ್ಲಿ ಸಂವತ್ಸರ ಪ್ರತಿಯೂ ಮಾಡಿಸಬೇಕೆಂದೂ ಸ್ಥಾವನರೂಪಸ್ಥಳದಲ್ಲಿ ಹನ್ನೆರಡು ವರ್ಷಗಳಿಗೊಂದುಸಲ ಮಾಡಬೇಕೆಂದೂ ಕೇವಲ ಮಾನುಷ ದೇವಾಲಯಗಳಲ್ಲಿ ಯಾವ ವಿಧವಾದ ಉತ್ಸವವನ್ನೂ ಮಾಡಕೂಡದೆಂದೂ ಭಗವಜ್ಞಾಸ್ತ್ರದಲ್ಲಿ ಏಕಕಂಠ್ಯದಿಂದ ಹೇಳಲ್ಪಟ್ಟಿರುತ್ತದೆ. ಈಗ ಭಗವದಾಜ್ಞೆಯನ್ನು ಮೀರಿ ಸಮಸ್ತ ದೇವಾಲಯಗಳಲ್ಲಿಯೂ ಯಾಜ್ಞಿಕರು ಸ್ವೇಚ್ಛಾನುಸಾರ ಜರಿಗಿಸಿ ಹೀಗೆ ಮಾಡುವುದರಿಂದಲೇ ರಾಜ ರಾಷ್ಟ್ರಗಳಿಗೆ ಬಗೆಬಗೆಯಾದ ಆಪತ್ತುಗಳು ಸಂಭವಿಸಿರುತ್ತವೆ. ಸ್ಥಾಪನರೂಪಸ್ಥಲದಲ್ಲಿ ಪ್ರತಿವರ್ಷದಲ್ಲಿಯೂ ಕೇವಲ ವೈವಾಹಿಕೋತ್ಸವವನ್ನು ಮಾತ್ರ ಜರಗಿಸಬೇಕೆಂದು ಹೇಳಿರುತ್ತದೆ. ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಸಂಪ್ರದಾಯವು ಈಗಲೂ ಉತ್ತರದೇಶದಲ್ಲಿ ಕೆಲವು ಕ್ಷೇತ್ರಗಳಲ್ಲಿಮಾತ್ರ ಆಚರಣೆಯಲ್ಲಿರುತ್ತದೆ. ಮಿಶ್ರ, ವೈದಿಕ ಸಿದ್ಧಾಂತಿಗಳು ಕೇವಲ ಮಾನುಷಾಲಯಗಳಲ್ಲಿ ಉತ್ಸವ ಬೇರಗಳ ಸ್ಥಾಪನಾರಾಧನೆಗಳನ್ನೂ ಉತ್ಸವಗಳನ್ನೂ ಮಾಡಕೂಡದು.

ಸ್ಥಾಪನರೂಪಾಲಯಗಳಲ್ಲಿ ವೈದಿಕ ಮಾರ್ಗಾನುವರ್ತರಾದ ದೀಕ್ಷಿತರು ಪೂಜಕರಾಗಿದ್ದರೆ ಆ ಸ್ಥಳದಲ್ಲಿ ಮಿಶ್ರಸಿದ್ಧಾಂತಿಗಳಿಂದ ಉತ್ಸವ ಬಿಂಬಾರಾಧನೋತ್ಸವಗಳನ್ನು ಜರಿಗಿಸಬೇಕು. ತಾವು ಮಾಡಲೇಕೂಡದು. ಸ್ವಯಂವ್ಯಕ್ತರೂವಾಲಯದಲ್ಲಿ ವೇದಮಾರ್ಗಾತೀತರಾದ ತಾಂತ್ರಿಕರಿಂದಲೇ ದೀಕ್ಷಿತರೂ ಮಿಶ್ರಮಾರ್ಗಾನುವರ್ತರೂ ಮಾಡಿಸಬೇಕು.

ಇದಕ್ಕೆ ವ್ಯತ್ಯಾನವಾಗಿ ಪೂಜಕರು ನಡೆದರೂ ಅಥವಾ ಧರ್ಮಾಧಿಕಾರಿಯು ನಡಿಸಿದರೂ ರಾಜ ರಾಷ್ಟ್ರಕ್ಕೆ ಹೆಚ್ಚಾದ ಕೇಡು ಉಂಟಾಗುತ್ತದೆಯೇ ಹೊರತು ರಾಷ್ಟ್ರಕ್ಕೆ ಸ್ವಲ್ಪವಾದರೂ ಕ್ಷೇಮವುಂಟಾಗಲಾರದು. ಅದಿಕಾರಿಗಳಿಗೇ ಈ ಪ್ರಕಾರ ಶಾಸ್ತ್ರದಲ್ಲಿ ಹೇಳಿರಲು ಪೂಜಾಧಿಕಾರವಿಲ್ಲದೆಯೇ ಇದ್ದವ ರುದೀಕ್ಷಿತರೂ ಮಾಡುತ್ತಿರುವುದು ನೋಡಿದರೆ ಅಧಿಕಾರದಿಂದ ಸ್ವಾಭಾವಿಕವಾದ

ದೋಷಗಳಿಗೆಲ್ಲಾ ಶಾಂತಿಯಾಗಲಿಕ್ಕೋ ! ಅಥವಾ ಅದಕ್ಕಿಂತಲೂ ನೂರ ರಷ್ಟು ಅಧಿಕವಾಗಿ ದೋಷಗಳನ್ನುಂಟುಮಾಡುವುದಕ್ಕೋ ! ಎಂಬ ವಿಷಯ ವನ್ನು ನ್ಯಾಯಶಾಸ್ತ್ರಜ್ಞರೂ ಪಂಡಿತ ಶಿಖಾಮಣಿಗಳೂ ನಿರೂಪಿಸ ಬೇಕಾಗಿದೆ.

ಪ್ರಕೃತದಲ್ಲಿ ಶಿವ ಕೇಶವಾದಿ ದೇವತಾಪ್ರತಿಷ್ಠೆಮಾಡಬೇಕೆಂದು ಯಾರಾ ದರೂ ಭಕ್ತರು ಮಿಶ್ರವೈದಿಕ ಸಿದ್ಧಾಂತರನ್ನು ಕೇಳಿದರೆ ಇವರು ತಮ್ಮ ತಮ್ಮ ಮಾರ್ಗಗಳನ್ನು ಶುದ್ಧಾಂಗವಾಗಿ ಒಟ್ಟು ಕೇವಲ ವಿರುದ್ಧವಾದ ತಾಂತ್ರಿಕ ಮಾರ್ಗದ ಆಗಮಸಿದ್ಧಾಂತಗಳಲ್ಲಿನ ಪ್ರತಿಷ್ಠಾವಿಧಿಗಳಲ್ಲಿ ಹೇಳಿರುವ ಕಲಶ, ವಸ್ತ್ರ, ಪ್ರತಿಮಾ, ಕುಂಕಣ, ಅಷ್ಟಬಂಧನಾದಿ ಸಂಭಾರ ದ್ರವ್ಯಗಳನ್ನು ತಮ್ಮ ತಮ್ಮ ಮಾರ್ಗಕ್ಕೆ ಅನುಪಯುಕ್ತವಾಗಿದ್ದರೂ ಸ್ವೇಚ್ಛೆಯಾಗಿ ಕುಟುಂಬ ಭರಣಾಸಕ್ತಿಯಿಂದ ದ್ರವ್ಯಾರ್ಜನೆಗೋಸ್ಕರ ಪಟ್ಟಗಳು ಬರೆದು ಕೊಡುತ್ತಾ ದ್ರವ್ಯಗಳೆಲ್ಲವನ್ನೂ ತರಿಸಿಕೊಳ್ಳುವರು. ಈ ದ್ರವ್ಯಗಳಲ್ಲೊಂದಾದರೂ ತಮ್ಮ ತಮ್ಮ ಮಾರ್ಗೋಕ್ತ ಉದ್ಯಾಪನ ವಿಧಿಗಳಲ್ಲಿ ಹೇಳಿರುವುದಿಲ್ಲ. ಮತ್ತು ಅಂತಹ ದ್ರವ್ಯಕ್ಕೆ ವಿನಿಯೋಗವು ಅವರ ಕಲ್ಪದಲ್ಲಿ ಹೇಳಿರುವುದಿಲ್ಲ, ಸ್ವರ್ಣಾದಿ ಲೋಹಪಾತ್ರೆಗಳನ್ನಿಡಲು ಮಿಶ್ರವೈದಿಕ ಮಾರ್ಗಾನುಷ್ಠಿರಿಗೆ ಅಧಿಕಾರವು ಶುದ್ಧಾಂಗವಾಗಿಲ್ಲ. ಮಿಶ್ರ ವೈದಿಕಮಾರ್ಗಕಲ್ಪಗಳಲ್ಲಿ ಯಾಜ್ಞಿಕವೃಕ್ಷ ಸಂಬಂಧವಾದ ಪಾತ್ರೆಗಳನ್ನು ಮಾತ್ರ ಹೇಳಿರುತ್ತಾರೆ. ವ್ರೀಹ್ಯಾದಿ ಧಾನ್ಯ ಗಳನ್ನು ಕಲಶಗಳ ಕೆಳಗಡೆ ಹಾಕಬೇಕೆಂದೂ ಆದರನಂತರ ಫಲ ಕೂರ್ಚ ವಸ್ತ್ರಾದಿಗಳನ್ನಿಡಬೇಕೆಂದೂ ಇವರ ಕಲ್ಪದಲ್ಲೆಲ್ಲಿಯೂ ಹೇಳಿರುವುದಿಲ್ಲ. ಮಿಶ್ರ ವೈದಿಕಮಾರ್ಗಗಳ ಪ್ರತಿಷ್ಠೆಯೆಂದು ಹೆಸರುಳ್ಳ ಉದ್ಯಾಪನ ವಿಧಿ ಗಳಲ್ಲಿ ಬಿಂಬಗಳನ್ನು ಸೀಸ, ವಾಲುಕಗಳಿಂದ ದೃಢೀಕರಿಸಬೇಕೆಂದು ಹೇಳಿದು ತ್ತದೆಯಲ್ಲದೆ ಸಜ್ಜರಸ ಮೊದಲಾದ ಪದಾರ್ಥಗಳಿಂದ ಕೂಡಿದ ಅಷ್ಟ ಬಂಧನೆಗಳನ್ನು ಹೇಳಿರುವುದಿಲ್ಲ. ಪ್ರತಿಷ್ಠೆಯೆಂಬ ಉದ್ಯಾಪನೆಗೆ ಪೂರ್ವ ದಿನದಲ್ಲಿಯಾಗಲೀ ಅಥವಾ ಉದ್ಯಾಪನದಿನದಲ್ಲಿಯಾಗಲೀ ಮಿಶ್ರ ವೈದಿಕ ಮಾರ್ಗಾನುಸಾರ ಆಯಾಯ ಕಲ್ಪಗಳಲ್ಲಿ ಹೇಳಿರುವ ಕರ್ಮಗಳೆಲ್ಲವನ್ನೂ ಮಾಡ ಬೇಕು. ಇವರಿಗೆ ದೀಕ್ಷಾನಿಯಮದ ಸಂಕಲ್ಪವಿರುವುದಿಲ್ಲ. ಇವರು ಆಗಮ ಸಿದ್ಧಾಂತಗಳಲ್ಲಿ ಹೇಳಿರುವಂತೆ ತ್ರಿ, ಪಂಚ, ಸಪ್ತ, ನವಾದಿ ಸಂಖ್ಯಾಹ್ನಿಕ ವೃಧಸ್ಸರವಾಗಿಯೂ, ಸಂಕಲ್ಪಪೂರ್ವಕವಾಗಿಯೂ ಪ್ರಕೃತದಲ್ಲಿ ಮಾಡು

ತ್ತಿರುವುದು ಅಶಾಸ್ತ್ರೀಯವಾಗಿದೆ. ಇದು ಉದರನಿಮಿತ್ತ (ಸ್ವಕುಕ್ಷಿ ಭರಣಾರ್ಥ) ಯಜ್ಞವಲ್ಲದೆ ಶಾಸ್ತ್ರೀಯವಾದ ಪ್ರತಿಷ್ಠಾನಾಮಕ ಉದ್ಯಾವನ ಕರ್ಮವಲ್ಲ. ಇಂತಹ ಅಶಾಸ್ತ್ರೀಯವಾದ ಕೃತ್ಯಗಳು, ಮೋಸಗಳು ಹೆಚ್ಚಾಗಿ ಪ್ರಪಂಚದಲ್ಲಿ ಜರಗುತ್ತಲಿರುವುದರಿಂದಲೇ ರಾಜ ರಾಷ್ಟ್ರ ಯಜಮಾನ ಆರ್ತ್ವಿಕ ಆಚಾರ್ಯಾದಿಗಳಿಗೆ ಮಹತ್ತರವಾದ ದೋಷಗಳು ಸಂಭವಿಸಿ ಅನೇಕವಿಧವಾದ ಅನರ್ಥಗಳಿಗೆ ಕಾರಣವಾಗಿದೆ. ಇಂತಹ ಅಧಿಕಾರರು ಮಾಡುವಂತಹ ಮಾರ್ಗವನ್ನು ಗಮನಿಸಿ ಪ್ರಕೃತದಲ್ಲಿ ಅನಧಿಕಾರರೂ ಅದೀಕ್ಷಿತರೂ ಆದ ದೇವಲಕರು ಆದಕ್ಕಿಂತಲೂ ನೂರರಷ್ಟಧಿಕವಾಗಿಯೇ ತಮಗೆ ಶಾಸ್ತ್ರವಿಲ್ಲದಿದ್ದರೂ ಕಲ್ಪಿಸಿಕೊಂಡು ಅಲ್ಲಲ್ಲಿ ಮಾಡಿಸುತ್ತಲಿದ್ದಾರೆ.

ಇವರುಗಳ ಆವಳಿಯಿಂದ ಉತ್ಪನ್ನವಾದ ಮಹೋತ್ಪಾತಾದಿ ದೋಷಗಳು ಭಾರತವರ್ಷದಲ್ಲಿ ವ್ಯಾಪಿಸಿರುವಂತಹವುಗಳನ್ನು ಹೇಳಲೂ ಬರೆಯಲೂ ಆದಿಶೇಷನಿಗೂ ಅಸಾಧ್ಯವಾಗಿರುತ್ತದೆಂಬುದು ಸರ್ವರಿಗೂ ನಿದರ್ಶನವಾಗಿಯೇ ಇದೆ. ರಾಜಾಧಿರಾಜರು ಇಂಥವರ ದ್ರೋಹಕಾರ್ಯಗಳಿಗೆ ಅವಕಾಶ ಕೊಡದೆ ನಿಲ್ಲಿಸಿದರೆ ಬಹಳ ಕ್ಷೇಮವಾಗಿರುತ್ತದೆ.

ಅದಲ್ಲದೆ ಶಿಲ್ಪಿಶಾಸ್ತ್ರಜ್ಞರಿಂದ ನಿರ್ಮಿಸಲ್ಪಟ್ಟ ಬಿಂಬಗಳ ಮಾನೋನ್ಮಾನ ಪ್ರಮಾಣಗಳು ಆಗಮಶಾಸ್ತ್ರಕ್ಕೆ ವಿರೋಧವಾಗಿರುತ್ತೆ. ಶಿಲ್ಪಿಗಳು ಶಿಲ್ಪ ಶಾಸ್ತ್ರರೀತಿಯಾಗಿ ಮೂರ್ತಿಗಳನ್ನು ಮಾಡುವುದೂ, ಆಗಮಜ್ಞರು ಆಗಮ ಶಾಸ್ತ್ರರೀತಿಯಾಗಿ ಪ್ರತಿಷ್ಠೆಮಾಡುವುದೂ ಆಶಾಸ್ತ್ರೀಯವು. ಇದರಿಂದ ಅನೇಕವಿಧವಾದ ಸಾಂಕರ್ಯ ದೋಷಗಳು ಸಂಭವಿಸುವುದಲ್ಲದೆ ರಾಜ ರಾಷ್ಟ್ರಗಳಿಗೆ ತೊಂದರೆಯುಂಟಾಗುತ್ತದೆಂದು ಭಗವಚ್ಛಾಸ್ತ್ರದಲ್ಲಿ ಹೇಳಿರುತ್ತದೆ.

ಸಾಕ್ಷಾದ್ಭಗವಂತನೇ ಅರ್ಚಾಯೋಗ್ಯವಾದ ದೇವತಾಮೂರ್ತಿಗಳನ್ನು ಕಲ್ಪಾದಿಯಲ್ಲಿ ನಿರ್ಮಿಸಿರುತ್ತಾನೆ. ಇವುಗಳಿಗೆ ಸಂಸ್ಕಾರಗಳನ್ನು ಮಾಡುವ ಅಧಿಕಾರಿಗಳಾದ ಮಹನೀಯರೂ ಆಗಮಶಾಸ್ತ್ರವೂ ಸಹ ಲೋಕತ್ರಯದಲ್ಲಿಯೂ ಇಲ್ಲವೆಂದು ಸಾಕ್ಷಾತ್ಪರಮೇಶ್ವರನೇ ಆ ಮೂರ್ತಿಗಳಿಗೆ ಸಂಸ್ಕಾರವನ್ನು ಮಾಡಿರುತ್ತಾನೆ. ಭಗವಂತನಿಂದ ಸಂಸ್ಕಾರವನ್ನು ಹೊಂದಿದ ಮೂರ್ತಿಗಳಿಗೆ ಪುನಃ ಭೂಲೋಕದಲ್ಲಿ ಯಾಜ್ಞಿಕರು ಸಂಸ್ಕಾರಾದಿಗಳನ್ನು ಮಾಡುವುದು ದ್ರವ್ಯಾರ್ಜನೆಗೋಸ್ಕರವೇಹೊರತು ಮತ್ತೇನೂ ಫಲಿತಾಂಶವಿಲ್ಲ. ಇಂತಹವುಗಳಿಗೆ ಪ್ರತಿಷ್ಠೆ, ಸಂಸ್ಕಾರ, ಆವಾಹನ ವಿಸರ್ಜನೆಗಳಿಲ್ಲ

ವೆಂದೂ, ಅಕಸ್ಮಿಕವಾಗಿ ಯಾರಾದರೂ ಮಾಡಿದರೆ ರಾಜ ರಾಷ್ಟ್ರಗಳಿಗೆ ದೋಷವೆಂದೂ, ಭಾರತ ನಿವಾಸಿಗಳು ಯಾರೂ ಸಾಲಗ್ರಾಮ ಬಾಣಶೋಣಾದಿಗಳಿಗೂ ಮತ್ತು ರಸಲಿಂಗಕ್ಕೂ ಪ್ರತಿಷ್ಠಾದಿ ಸಂಸ್ಕಾರಗಳನ್ನು ಮಾಡಕೂಡದೆಂದೂ ಆಗಮಶಾಸ್ತ್ರದಲ್ಲಿ ಭಗವಂತನೇ ಘಂಟಾಘೋಷವಾಗಿ ಹೇಳಿರುತ್ತಾನೆ. ಇದೇರೀತಿಯಾಗಿ ಪುರಾಣೇತಿಹಾಸಗಳಲ್ಲಿಯೂ ಮಹರ್ಷಿಗಳು ಹೇಳಿರುತ್ತಾರೆ.

ಈ ಮೂರ್ತಿಗಳು ಮನುಷ್ಯಕೃತವಾದುದೂ, ಕೀಟಾದಿಗಳಿಂದ ನಿರ್ಮಿತವಾದುದೂ ಅಲ್ಲ. ಸ್ವಯಂವ್ಯಕ್ತವಾದುದು. ಈ ಮೂರ್ತಿಗಳು ಯಾವುವೆಂದರೆ:—ಸಾಲಗ್ರಾಮ, ಶಿವನಾಭಿ, ಹಿಂಗುಳಾಪೀಠೋದ್ಭವ, ಮಾತೃಪುರಸ್ಥ ಶೋಣ, ನರ್ಮದಾ ಇವುಗಳಲ್ಲಿ ಸ್ವಯಂವ್ಯಕ್ತವಾಗಿ ಮೂರ್ತಿಗಳುದ್ಭವಿಸುತ್ತವೆ. ಈ ಮೂರ್ತಿಗಳಲ್ಲಿಯೂ ಈ ನದಿಗಳಲ್ಲುದ್ಭವಿಸಿದ ಸಮಸ್ತ ಶಿಲೆಗಳಲ್ಲಿಯೂ ಸಹ ಭಗವಂತನು ಸದಾ ಸನ್ನಿಹಿತನಾಗಿದ್ದಾನೆ. ಇಂತಹ ಶಾಸ್ತ್ರೋಕ್ತವಾದ ಪ್ರತ್ಯಕ್ಷಮೂರ್ತಿಗಳನ್ನೂ ಪೂಜಾಯೋಗ್ಯವಾದ ಶಿಲೆಗಳನ್ನೂ ಸಾಕ್ಷಾದ್ಭಗವಂತನು ನಿರ್ಮಿಸಿಕೊಟ್ಟಿರುವಲ್ಲಿ ವೈದಿಕೋತ್ತಮರಾದ ಮಹನೀಯರು ಇವುಗಳೆಲ್ಲವನ್ನೂ ಶುದ್ಧಾಂಗವಾಗಿ ಬಿಟ್ಟು ಪೂಜೆಗೆ ಅಯೋಗ್ಯವಾದ ಶಿಲೆಗಳಲ್ಲೆಲ್ಲಾ,'ಅನಧಿಕಾರರಾದ ಶಿಲ್ಪಿಗಳಿಂದ ವಿಗ್ರಹಗಳನ್ನು ಮಾಡಿಸಿದೇವಾಲಯಗಳಲ್ಲಿ ಸ್ಥಾಪನೆಯನ್ನು ಮಾಡಿಸುವುದು ಅವಿಚಾರವಾದುದು. ಇದರಿಂದ ನಮಗೆ ವಿಶೇಷ ಧನವ್ಯಯವೇಹೊರತು ಆವಿಗ್ರಹಗಳಲ್ಲಿ ಮೂರ್ತಿತ್ವವಿರುವುದಿಲ್ಲ. ಬಾಲೆಯರು ಆಟಕ್ಕೆ ಬೊಂಬೆಗಳನ್ನಿಟ್ಟುಕೊಂಡಿರುವಂತೆ ಇರುತ್ತದೆ. ರಾಜ ರಾಷ್ಟ್ರ ಆಚಾರ್ಯಾರ್ಚಕ ಯಜಮಾನ ಶಿಲ್ಪಿಗಳಿಗೆ ದೋಷಗಳೂ ವಂಶನಷ್ಟಗಳೂ ಉಂಟಾಗಲು ಕಾರಣವಾಗಿರುತ್ತೆ. ವೈದಿಕ ಮಿಶ್ರ ಮಾರ್ಗದವರು ಸಿಕ್ಕಿದ ಶಿಲೆಗಳಿಂದ ಮಾಡಿದ ಮೂರ್ತಿಗಳನ್ನು ಆರಾಧಿಸಕೂಡದೆಂದೂ ಶಿವನಾಭಿ ಸಾಲಗ್ರಾಮ ಬಾಣಾದಿಗಳು ಸರ್ವೋತ್ತಮವಾಗಿರುವುದರಿಂದ ಇವುಗಳನ್ನೇ ಶ್ರೌತ ಸ್ಮಾರ್ತಾನು ಧ್ಯಾನಪರರಾದ ಬ್ರಾಹ್ಮಣಾದಿ ಸಮಸ್ತ ವರ್ಣದವರೂ ಆರಾಧಿಸಬಹುದೆಂದೂ ಶಾಸ್ತ್ರದಲ್ಲಿ ಘಂಟಾಘೋಷವಾಗಿ ಹೇಳಿರುತ್ತದೆ.

ಮನು, ಮಯ, ಕಾಶ್ಯಪ, ವಿಶ್ವಕರ್ಮಾದಿಪ್ರಣೀತವಾದ ಶಿಲ್ಪಿಶಾಸ್ತ್ರರೀತಿಯಾಗಿ ಸಪ್ರಮಾಣವಾಗಿ ಅರ್ಚಾಯೋಗ್ಯವಾದ ಸಾಲಗ್ರಾಮ ನರ್ಮದಾದಿ ಶಿಲೆಗಳಿಂದ ನಿರ್ಮಿಸಲ್ಪಟ್ಟ ವಿಗ್ರಹಗಳನ್ನೂ ಶಿವಲಿಂಗಗಳನ್ನೂ ಸ್ವಯಂವ್ಯಕ್ತ

ರೂಪಾಲಯ ಸ್ಥಾಪನರೂಪಾಲಯಗಳಲ್ಲಿ ಆಗೆಮಾಧ್ಯಷ್ಟ ಸಿದ್ಧಾಂತದಲ್ಲಿ ಹೇಳಿರುವ ಸ್ವಯಂವ್ಯಕ್ತಾದಿ ಅಷ್ಟಾಂತಸ್ಥಲೋಕ್ತ ವಿಧಿಗಳಾದ ಉತ್ತಮೋತ್ತಮ ಉತ್ತಮ ಮಧ್ಯಮಾದಿ ಭೇದಗಳಿಂದುಕ್ತವಾದ ಮುಖ, ಧಾರಾ, ಸಹಸ್ರ, ಶಿವಾಧಿಕ್ಯ, ಸಾರ್ವದೇಶಿಕಾದ್ಯನೇಕ ಭೇದ ನಾನಾ ವಿಧಿಗಳಿಂದಿರುವ ಲಿಂಗಸ್ಥಾಪನ ವಿಧಿಗಳನ್ನೂ, ಉತ್ತಮಾದಿ ಪ್ರಭೇದ ಪ್ರತಿಮಾಸ್ಥಾಪನ ವಿಧಿಗಳನ್ನೂ ಸಹ ಆಮೂಲವಾಗಿ ತ್ಯಜಿಸಿ ಆಗಮಶಾಸ್ತ್ರದಲ್ಲಿ ಶಿಲ್ಪಶಾಸ್ತ್ರರೀತಿಯಾಗಿ ನಿರ್ಮಿಸಲ್ಪಟ್ಟ ಲಿಂಗ, ಬಿಂಬಗಳಿಗೆ ಯಾನವಿಧಿಯಿಂದ ಮಾಡಬೇಕೆಂದು ಭಗವಂತನು ನಿರ್ಧರಿಸಿ ಹೇಳಿರುವನೋ ಅಂತಹ ವಿಧಿಯಾದ ಶೈಲಾರ್ಚಾಲಿಂಗ ಸ್ಥಾಪನ, ಶೈಲಾರ್ಚಾ ಪ್ರತಿಮಾಸ್ಥಾಪನ, ತಾಮ್ರಾರ್ಚಾ ಪ್ರತಿಮಾಸ್ಥಾಪನ ವಿಧಿಗಳಿಂದಲೇ ಮಾಡಬೇಕು. ಕೇವಲ ಮಾನುಷಾಲಯಗಳಲ್ಲಿ ಸ್ವಯಂ ಉದ್ಭವಿಸಿದ ಬಾಣಾಂಬಿಕಾಶೋಣ ಸಾಲಿಗ್ರಾಮಾದಿಗಳನ್ನು ವಿನಹ ಪ್ರತಿಮಾರೂಪಗಳನ್ನಿಟ್ಟು ಸ್ಥಾಪನಾದಿಗಳನ್ನು ಮಾಡಕೂಡದು. ನೋಡುವುದಕ್ಕೆ ಅಲಂಕಾರಾರ್ಥವಾಗಿಯೂ ಸುಂದರವಾಗಿಯೂ ಇರುತ್ತದೆಂದು ಮಾನುಷಾಲಯಗಳಲ್ಲಿ ವಿಗ್ರಹಗಳನ್ನಿಟ್ಟರೆ ಆಯಾ ಆಲಯಗಳ ಅರ್ಚಕ, ಯಜಮಾನರ ವಂಶಗಳು ಹಾಳಾಗುತ್ತದೆಂದು ಹೇಳಿರುತ್ತದೆ ; ಮತ್ತು ರಾಜ ರಾಷ್ಟ್ರಕ್ಕೂ ದೋಷವುಸಂಭವಿಸುತ್ತದೆ. ಆದುದರಿಂದ ಭಕ್ತರಾದ ಮಹನೀಯರು ಯಾರೂ ಪೂರ್ವೀಕರು ಇಟ್ಟಿರುತ್ತಾರೆಂದು ಅಧಿಕಾರಾದಿಗಳನ್ನೂ ಆಲಯ ಭೇದಗಳನ್ನೂ ವಿಚಾರಿಸದೆ ಮೋಹದಿಂದ ಅಂಧಪರಂಪರೆಯಾಗಿಡಕೂಡದು. ಶಾಸ್ತ್ರ ವಿಮರ್ಶೆಯನ್ನು ಮಾಡಬೇಕು. ಪೂರ್ವೀಕರು ಸ್ವಯಂವ್ಯಕ್ತರೂಪ ಸ್ಥಾಪನರೂಪಾಲಯಗಳಲ್ಲಿ ಮಾತ್ರ ಮಿಶ್ರಸಿದ್ಧಾಂತಮಾರ್ಗರೀತಿಯಾಗಿಟ್ಟಿರುತ್ತಾರೆ. ಚೋಳರು ಮಾನುಷಾಲಯಗಳಲ್ಲಿ ವಿಗ್ರಹಗಳನ್ನಿಟ್ಟಿರುವುದಿಲ್ಲ. ಪ್ರಕೃತದಲ್ಲಿ ಅಂಧ ಪರಂಪರೆಯಿಂದ ಸರ್ವರೂ ವಿಗ್ರಹಗಳನ್ನು ಮುಖ್ಯಾಲಯಗಳಲ್ಲಿಟ್ಟಿರುತ್ತಾರೆ. ಇದು ಶಾಸ್ತ್ರಸಂಬಂಧವಲ್ಲವು.

ಭಗವದಾಜ್ಞೆಯನ್ನುಲ್ಲಂಘಿಸಿ ಅನ್ಯಥಾ ಮಾಡಿದರೆ ರಾಜ ರಾಷ್ಟ್ರಗಳಿಗೆ ದೋಷಗಳು ಸಂಭವಿಸುವುದಾದ ದರಿಂದ ಮಾಡಕೂಡದೆಂದು ಭಗವಚ್ಛಾಸ್ತ್ರದಲ್ಲಿ ಹೇಳಿರುತ್ತದೆ.

ದೇವತಾಮೂರ್ತಿಗಳನ್ನು ಮಾಡಿಸುವ ಮಹನೀಯರೆಲ್ಲರೂ ಆತ್ಯವಶ್ಯಕವಾಗಿ " ದೇವತಾಮೂರ್ತಯಃ ಕಥಂಜಾತಾಃ " ಎಂಬ ಮಹೋಪನ್ಯಾಸ

ವನ್ನು ನೋಡಿದರೆ ದೇವತಾಮೂರ್ತಿಗಳ ವಿಷಯವೆಲ್ಲವೂ ವಿಶದವಾಗುತ್ತದೆ. ಈಪ್ರಕಾರ ಶಾಸ್ತ್ರದಲ್ಲಿ ವಿಶದವಾಗಿ ಹೇಳಿದ್ದರೂ ಪ್ರತ್ಯಕ್ಷದಲ್ಲಿ ಶಿಲ್ಪಿಕಾರ್ಪರೂ ಅರ್ಚಕರೂ ಸೇರಿ ಜನಗಳನ್ನು ಮರಳುಗೂಡುತ್ತಾ ಭಗವದುಕ್ತವಾದ ಮಾರ್ಗಗಳನ್ನೂ ವಮೂರ್ತಿಗಳನ್ನೂ ಆಮೂಲವಾಗಿ ತ್ಯಜಿಸಿ ಭಗವತ್ಪ್ರೋಹಶಿಖಾಮಣಿಗಳಾಗಿ ಉತ್ಪಾತಕಗಳನ್ನುಂಟುಮಾಡಲು ಕರ್ತರಾಗಿ ಪ್ರವ್ಯಾಜನೆಗಿದೊಂದುಪಾಯವೆಂದು ತಿಳಿದು ಈ ವಿಧವಾಗಿ ಕಲ್ಪಿಸಿಕೊಂಡಿದ್ದಾರೆ. ಸ್ವೇಚ್ಛೆಯಾಗಿ ಸಿಕ್ಕಿದ ಕಲ್ಲುಗಳಲ್ಲಿ ಮಾಡಿದ ವಿಗ್ರಹಗಳೇ ಪ್ರಪಂಚದಲ್ಲಿ ರಾಜರಿಗೂ ಯಜಮಾನರಿಗೂ ಗ್ರಾಮಾಧಿಪತಿಗಳಿಗೂ ಶತ್ರುರೂಪವಾಗಿ ಪರಿಣಮಿಸಿ ಉತ್ಪಾತಕಗಳನ್ನುಂಟುಮಾಡುತ್ತವೆಂದು ಹೇಳಿರುತ್ತವೆ.

ಈಗಿನಕಾಲದಲ್ಲಿ ಶಿಲ್ಪಿಕಾರರು ಶಿಲ್ಪಿಶಾಸ್ತ್ರೋಕ್ತ ಮಾನೋನ್ಮಾನ ಪ್ರಮಾಣರಹಿತವಾಗಿಯೇ ವಿಗ್ರಹಗಳನ್ನು ಮಾಡುತ್ತಲಿದ್ದಾರೆ. ಮತ್ತು ವಿಗ್ರಹಗಳನ್ನು ಮಾಡತಕ್ಕಕಾಲದಲ್ಲಿ ಆ ಬಿಂಬಗಳಲ್ಲಿ ಆಕಸ್ಮಿಕವಾಗಿ ಹಸ್ತ ಪಾದಾದಿಗಳು ಭಿನ್ನವಾದರೆ ಅವುಗಳನ್ನೇ ಶಿಲಾಟಂಕದಿಂದ ಸರಿಪಡಿಸಿ ಮೋಸದಿಂದ ಕೊಡುತ್ತಲಿದ್ದಾರೆ. ಇಂತಹ ವಿಗ್ರಹಗಳನ್ನೂ ಪ್ರಮಾಣರಹಿತವಾಗಿ ರತಕ್ಕ ಬಿಂಬಗಳನ್ನೂ ಸಮಸ್ತ ದೇವಾಲಯಗಳಲ್ಲಿಯೂ ಎಲ್ಲರೂ ನೋಡಿ ಆನಂದಿಸಬಹುದು. ಇದರಿಂದ ರಾಜ ರಾಷ್ಟ್ರಗಳಿಗೆ ದೋಷವೇಹೊರತು ಕ್ಷೇಮವಿಲ್ಲ.

ಆದುದರಿಂದಲೇ ಮರ್ತ್ಯಲೋಕದಲ್ಲಿ ರಸಲಿಂಗ ಸಾಲಗ್ರಾಮ ಬಾಣಾದಿಗಳೇ ಶ್ರೇಷ್ಠವೆಂದೂ ಬೇರೆ ಭಾರತವರ್ಷದಲ್ಲಿ ಮಾಡಕೂಡದೆಂದೂ ಹೇಳಿರುವುದು. ಇವುಗಳಿಂದ ರಾಜ ರಾಷ್ಟ್ರಗಳಿಗೆ ಯಾವವಿಧವಾದ ದೋಷಗಳೂ ಉಂಟಾಗುವುದಿಲ್ಲ ಮೂರ್ತಿಕಲ್ಪನೆಯು ತಾಂತ್ರಿಕರಿಗೇಹೊರತು ವೈದಿಕರಿಗೆ ಯಾವಶಾಸ್ತ್ರದಲ್ಲಿಯೂ ಹೇಳಿರುವುದಿಲ್ಲ. ತಾಂತ್ರಿಕ ಮಿಶ್ರಸಿದ್ಧಾಂತಿಗಳು ಸಾಲಗ್ರಾಮ ಬಾಣಾದಿಗಳನ್ನೂ, ಸಾಲಗ್ರಾಮಾದಿ ಶಿಲೆಗಳಲ್ಲಿ ಮೂರ್ತಿಗಳನ್ನೂ ನಿರ್ಮಿಸಿಕೊಂಡು ಸ್ವಯಂವ್ಯಕ್ತರೂಪಾಲಯ ಸ್ಥಾಪನರೂಪಾಲಯಗಳಲ್ಲಿ ಆರಾಧಿಸಬೇಕು. ವೈದಿಕಮಾರ್ಗಾಧಿಕಾರಿಯು ಸ್ವಯಂವ್ಯಕ್ತವಾಗಿರುವ ಸಾಲಗ್ರಾಮ ಬಾಣಲಿಂಗಗಳನ್ನೇ ಪೂಜಿಸಬೇಕು. ಮೂರ್ತಿಕಲ್ಪನೆಯನ್ನು ಮಾಡಿ ಪೂಜಿಸಕೂಡದು. ಈ ಆಚರಣೆಯುಳ್ಳ ಗೃಹದೇವತಾರಾಧನೆಯಲ್ಲಿ ಮಾತ್ರ ಮೂರ್ತಿಕಲ್ಪನೆ ಇಲ್ಲದೆ ಸಾಲಗ್ರಾಮ ಬಾಣ ಆದಿತ್ಯಾಂಬಿಕಾಶೋಣ

ಗಳನ್ನಿಟ್ಟಿರುತ್ತಾರೆ. ಉತ್ತರ ದೇಶದ ಅನೇಕ ಕ್ಷೇತ್ರಗಳಲ್ಲಿ ವಿಗ್ರಹಾಕಾರ
ವಿಲ್ಲದೆಯೇ ಸಾಲಗ್ರಾಮ ಬಾಣ ಶೋಣಾಂಭಿಕಾದಿಗಳಿರುತ್ತವೆ. ಇದೇ ಶಾಸ್ತ್ರೀ
ಯವಾದುದು.

ಸಾಕ್ಷಾದೀಶ್ವರ ವಾಕ್ಯಗಳಿಗೆ ಜನ್ಮತಃ ಈಶ್ವರಸ್ವರೂಪರಾಗಿ ಅವತರಿಸಿರ
ಬೇಕು. ಭಗವತ್ಸ್ವರೂಪರಾಗಿ ಅಸ್ಮದಾದಿಗಳ ನಿಯಾಮಕರಾದ ಸೃಷ್ಟಿ ಸ್ಥಿ
ತ್ಯಾದಿಕರ್ತರೇ ಅವತರಿಸಿರುವುದಿಲ್ಲ. ಅಥವಾ ಆಗಮೋಕ್ತವಾಗಿ ಗರ್ಭಾ
ದಾನಾದಿ ಸಂಸ್ಕಾರಗಳನ್ನೂ ವಿಕೋತ್ತರಶತದೀಕ್ಷಾ ಸಂಸ್ಕಾರಗಳನ್ನೂ
ಹೊಂದಿ ವೈದಿಕ ಸ್ಮಾರ್ತಧರ್ಮಗಳನ್ನು ಆಮೂಲವಾಗಿ ತ್ಯಜಿಸಿ ಕೇವಲ ಶೈವ
ವೈಷ್ಣವ ಧರ್ಮಾನುಷ್ಠಾನದಿಂದಲೇ ಭಗವತ್ಸ್ವರೂಪವನ್ನು ಹೊಂದಿರಬೇಕು.
ಇದು ಮೊದಲೇ ಅಸ್ಮದಾದಿಗಳ ವಂಶಪರಂಪರೆಯಲ್ಲಿಲ್ಲ. ಮಿಶ್ರವೈದಿಕ
ಮಾರ್ಗಾಧಿಕಾರಿಗಳಾದ ನಾವುಗಳು ವಂಶಪರಂಪರೆಯಿಂದಲೂ ಇದ-ವರೆಗೂ
ಕಾಂಭವ ಬೋಧಾಯನ ಕಾತ್ಯಾಯನ ಔಶನೇಯ ಸೂತ್ರಾನುಷ್ಠಾನಪರರಾಗಿ
ಬೋಧಾಯನ, ಕಾಂಭವ ಕಾತ್ಯಾಯನ, ಔಶನೇಯರೆಂಬ ನಾಮಗಳಿಂದ
ಪ್ರಸಿದ್ಧಿಯನ್ನು ಪಡೆದಿರುತ್ತೇವೆ. ಆದುದರಿಂದ ನಮ್ಮಗಳಿಗೆ ಶೈವ ವೈಷ್ಣವ
ಮುಖ್ಯ ಬ್ರಹ್ಮರ್ಷಿಗಳ ವಾಕ್ಯಗಳೇ ಅನುಷ್ಠಾನಕ್ಕೆ ಶ್ರೇಷ್ಠವಾಗಿರುತ್ತದೆ.
ಕೌಶಿಕ ಕಾಶ್ಯಪ ಭಾರದ್ವಾಜ ಗೌತಮಾಗಸ್ತ್ಯನಾಮಕ ಪಂಚಗೋತ್ರದವರು
ಶೈವಬ್ರಾಹ್ಮಣರೆಂದೂ, ಔಪಗಾಯನ ಶಾಂಡಿಲ್ಯ ಭರದ್ವಾಜ ಕೌಶಿಕ ಮೌಂ
ಜ್ಯಾಯನವೆಂಬ ಪಂಚಗೋತ್ರದವರೂ ಮತ್ತು ಕಾಶ್ಯಪ ಅತ್ರಿ ಭಾರದ್ವಾಜ
ಕೌಶಿಕ ಪರಾಶರ ಹಾರೀತಾಖ್ಯ ಷಡ್ಗೋತ್ರದವರೂ ಭಾಗವತರೆಂದೂ ಭಗವ
ಚ್ಛಾಸ್ತ್ರದಲ್ಲಿ ಹೇಳಿರುತ್ತದೆ. ಇವರಿಗೇಯೇ ಪ್ರತಿಷ್ಠೆ ಉತ್ಸವ ಮುಂತಾದ
ಕರ್ಮಾಧಿಕಾರವು. ಈಮೇಲ್ಕಂಡ ಗೋತ್ರಜರಲ್ಲಿಯೂ ವಂಶಪಾರಂಪರ್ಯವಾಗಿ
ಆಭಿಷೇಕನಾಮಕ ದೀಕ್ಷಾಸಂಸ್ಕಾರವನ್ನು ಹೊಂದಿ ನೈಮಿತ್ತಿಕಾದಿ ಕರ್ಮ
ಗಳನ್ನು ಜರಿಗಿಸಬೇಕು. ದೀಕ್ಷೆಯನ್ನು ಹೊಂದದೆ ಮಾಡಿಸಕೂಡದು. ದಂಭ
ಮಾತ್ಸರ್ಯಾದಿಗಳಿಂದ ಆಚಾರ್ಯಪದಾಧಿಕಾರವನ್ನು ಹೊಂದದೆಯೇ ಮಾಡಿಸಿದರ
ಯಜಮಾನ ಆಚಾರ್ಯರ ವಂಶಗಳು ನಾಶವನ್ನು ಹೊಂದುವುದು. ಅಧಿಕಾರ
ರಾದ ಈ ಶೈವ ವೈಷ್ಣವಗೋತ್ರದ ಸಂತತಿಯವರಲ್ಲಿಯೂ ಯಾವ ಯಾವ
ಗೋತ್ರದವರಿಗೆ ತ್ರಿ, ಪಂಚ, ಸಪ್ತ ಪೌರುಷಗಳಿಂದ ಆಚಾರ್ಯಪದಾಧಿ
ಕಾರಕ್ಕೆ ಬಂಧಕವುಂಟಾಗಿ ನಿಂತಿರುವುದೋ ಅಂತಹ ಗೋತ್ರಸಂತತಿ

ಯವರಿಗೆ ಪುನಃ ಆ ಅಧಿಕಾರವನ್ನು ಹೊಂದಲು ಯೋಗ್ಯತ್ವವಿರುವುದಿಲ್ಲ ಇಂತಹ ಬ್ರಹ್ಮಘಾತಕರು ಪ್ರತಿಷ್ಠಾದ್ಯುತ್ಸವಕರ್ಮಗಳನ್ನು ಮಾಡಿಸಕೂಡದು. ಒಂದುವೇಳೆ ಮಾಡಿಸಿದ್ದಾದರೆ ರಾಜ ರಾಷ್ಟ್ರಗಳಿಗೂ ಮಾಡಿಸಿದವನಿಗೂ ದೋಷಗಳು ಸಂಭವಿಸುತ್ತದೆಂದು ಹೇಳಿರುವ ಸ್ಮೃತಿವಾಕ್ಯಗಳನ್ನು ಮಹನೀಯರು ಮನಸಾ ವಾಚಾ ಸ್ಮರಣಕ್ಕೆ ತರಬೇಕು.

ಕೇವಲ ವೈದಿಕಮಾರ್ಗದಲ್ಲಿನ ರಥ ಯಾತ್ರೋತ್ಸವ ವಿಧಿಗಳಲ್ಲಿ ರಥ ಯಾತ್ರಾಕಾಲದಲ್ಲಿ ತ್ರಿದಿನ ಸಂಕಲ್ಪಕ್ಕೆ ಅಧಿಕವಾಗಿ ಸಂಕಲ್ಪನಿಯಮವನ್ನೂ ವಾಸ್ತುನಿಯಮವನ್ನೂ ಬಲಿಪ್ರದಾನ ನಿಯಮವನ್ನೂ ವಾಸ್ತ್ವಂತರ್ಗತ ಉತ್ಸವಭ್ರಮಣನಿಯಮವನ್ನೂ ಹೇಳಿರುವುದಿಲ್ಲ. ಈ ನಿಯಮಗಳೆಲ್ಲವನ್ನೂ ಕೇವಲ ತಾಂತ್ರಿಕಮಾರ್ಗದಲ್ಲಿನ ಉತ್ಸವಪ್ರಕರಣಗಳಲ್ಲಿ ಹೇಳಿರುತ್ತದೆ. ವೈದಿಕ ಮಾರ್ಗಾಧಿಕಾರರು ವೈಶ್ವದೇವಪ್ರಕರಣದಲ್ಲಿ ಹೇಳಿರುವಂತೆ ದೇವ ಮಂದಿರದಲ್ಲಿ ಮಾತ್ರ ಬಲಿಹರಣವನ್ನು ಹಾಕಬೇಕೆಂದೂ ಯಾತ್ರಾದಿನದಲ್ಲಿ ರಥಾಂಗದ್ವಾತ್ರಿಂಶದ್ದೇವತೆಗಳಿಗೆ ಬಲಿಯನ್ನು ಹಾಕಬೇಕೆಂದೂ ಗ್ರಾಮುವುರಾದಿಗಳಲ್ಲಿ ಪ್ರಾಗಾದಿಚತುರ್ದಿಕ್ಕುಗಳಲ್ಲಿಯೂ ಒಂದೊಂದುದಿನ ಒಂದೊಂದು ದಿಕ್ಕಿನಲ್ಲಿಯೂ ಆಥವಾ ಸರ್ವತ್ರ ಒಂದೇದಿವಸದಲ್ಲಿಯಾದರೂ ರಥಯಾತ್ರೋತ್ಸವನವನ್ನು ಜರಿಗಿಸಬೇಕೆಂದೂ ಭಕ್ತರ ಅಭೀಷ್ಟ ಸ್ಥಳಕ್ಕೆ ಉತ್ಸವನವನ್ನು ಬಿಜಮಾಡಿಸಿ ಅಲ್ಲಿ ಭಕ್ತರಕೋರಿಕೆಯಂತೆ ಭಗವತ್ಸೇವೆಯನ್ನುಮಾಡಬೇಕೆಂತಲೂ ಶೈವ ಪಾಂಚರಾತ್ರವೈಖಾನಸಕಾಸ್ತ್ರಗಳಲ್ಲಿನ ವೈದಿಕಮಾರ್ಗವಿಧಿಗಳಲ್ಲಿ ಘಂಟಾಘೋಷವಾಗಿ ಹೇಳಿರುತ್ತದೆ. ಪ್ರಕೃತದಲ್ಲಿ ವೈದಿಕಮಾರ್ಗಾಧಿಕಾರಿಗಳಾದ ದೀಕ್ಷಿತರು ಸ್ವಸಿದ್ಧಾಂತವನ್ನನುಷ್ಠಿಸದೆ ಶುದ್ಧಾಂಗವಾಗಿ ತ್ಯಜಿಸಿ ತಾಂತ್ರಿಕ ಸಿದ್ಧಾಂತವನ್ನನುಷ್ಠಿಸುತ್ತಲಿರುವುದು ಅವಿಚಾರಣೀಯವಾದುದು. ಇದರಿಂದ ರಾಜ ರಾಷ್ಟ್ರಗಳಿಗೆ ಅನೇಕದೋಷಗಳುಂಟಾಗುತ್ತದೆಂತಲೂ ಆಚಾರ್ಯ ಯಜಮಾನಾರ್ಚಕರಿಗೆ ಹಾನಿಕರವೆಂತಲೂ ಹೇಳಿರುತ್ತದೆ ವೈದಿಕಮಾರ್ಗಾಧಿಕಾರಿಗಳಾದ ದೀಕ್ಷಿತರಿಗೆ ಯಾವ ನಿಯಮವೂ ಇಲ್ಲವೆಂದು ಹೇಳಿರುವಲ್ಲಿ ಕೇವಲ ಅನಧಿಕಾರಿಗಳಾದ ಅದೀಕ್ಷಿತರು ರಥ ಯಾತ್ರೋತ್ಸವದಲ್ಲಿ ತಾಂತ್ರಿಕಮಾರ್ಗದಲ್ಲಿನ ನಿಯಮಗಳನ್ನಾಚರಿಸುತ್ತಾ ವಾಸ್ತ್ವತಿಭ್ರಮಣೋತ್ಸವನವನ್ನು ನೂಡಕೂಡದೆಂದು ಹೇಳುವುದು ಕೇವಲ ಮೂರ್ಖತನದ ವಿಷಯವೇ

ಹೊರತು ಶಾಸ್ತ್ರೀಯವಾದ ವಿಷಯವಲ್ಲ ಇದರಿಂದ ಅನೇಕ ದೋಷಗಳುಂಟಾಗಲು ಕಾರಣವಾಗಿರುತ್ತದೆಂದು ಭಗವಚ್ಛಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ.

ಶ್ರೌತಕರ್ಮಗಳಾದ ಅಗ್ನಿಷ್ಟೋಮ ಪೌಂಡರೀಕಾದಿ ಯಜ್ಞಗಳನ್ನು ಶಿವ ವಿಷ್ಣ್ವಾಲಯಗಳಲ್ಲಿ ಎಲ್ಲಿಯೂ ಮಾಡಕೂಡದು. ಇದು ಭಗವಚ್ಛಾಸ್ತ್ರಗಳಿಗೆ ಕೇವಲ ವಿರೋಧವಾಗಿರುತ್ತದೆ ಅಜ್ಞಾನದಿಂದಾಗಲೀ ಜ್ಞಾನದಿಂದಾಗಲೀ ಯಾರು ಸೋಮಯಾಗಾದಿಗಳನ್ನು ದೇವಾಲಯ ವಾಸ್ತುವಿನಲ್ಲಿ ಮಾಡುತ್ತಾರೆಯೋ ಅವರ ವಂಶವು ಕ್ಷಯವಹೊಂದುವುದಲ್ಲದೆ ತದ್ರಾಷ್ಟ್ರ ರಾಜರಾಷ್ಟ್ರಾದಿಗಳಿಗೂ ದೋಷಗಳನ್ನು ಪ್ರಾಪ್ತಿಸುತ್ತದೆಂದು ವೈನ ಪಂಚರಾತ್ರ ವೈಖಾನಸ ಭಗವಚ್ಛಾಸ್ತ್ರಗಳಲ್ಲಿ ಖಂಡಿತವಾಗಿ ಹೇಳಿರುತ್ತದೆ. ಪ್ರಕೃತದಲ್ಲಿ ಸೋಮಯಾಜಿಗಳು ಕೆಲವುಕಡೆ ದೇವಾಲಯಗಳಲ್ಲಿ ಯಜ್ಞಗಳನ್ನು ನಡೆಸಲು ಪ್ರಯತ್ನಿಸಿರುತ್ತಾರೆ. ಇದು ಪ್ರಮಾದವಾದುದು

ರಥ ಯಾತ್ರೋತ್ಸವ ಕಾಲದೊಳಗೆ ರಥಯಾತ್ರಾದಿನದಲ್ಲಿ ಪ್ರಾತಃಕಾಲ ಭಗವಚ್ಛಾಸ್ತ್ರೀಯವಾಗಿ ಉತ್ಸವಾಂಗ ದೈವಿಕ ಕರ್ಮಗಳೆಲ್ಲವನ್ನೂ ಸಾಂಗವಾಗಿ ಜರಿಗಿಸಿ ಉತ್ಸವ ಮೂರ್ತಿಗಳಿಗೆ ಸುಹದಾರಾರ್ತಿಕವಾದ ನಂತರ ಬ್ರಾಹ್ಮಣರೇ ವೇದಘೋಷದಿಂದ ಸುಮುಹೂರ್ತದಲ್ಲಿ ಸ್ವಾಮಿಯವರನ್ನು ರಥದೊಳಕ್ಕೆ ಬಿಜಯಂಗ್ಯಸಿ ವೇದಪರನದಿಂದ ಬ್ರಾಹ್ಮಣರು ಆಕಾಲದಲ್ಲಿ ನಿರ್ದಿಷ್ಟಸ್ಥಾನದವರಗೂ ರಥವನ್ನು ಎಳಿಯಬೇಕು ಸಂಧ್ಯಾಕಾಲದಲ್ಲಿಮಾತ್ರ ಕ್ಷತ್ರಿಯಾದಿ ತ್ರಿವರ್ಣದವರೂ ಪೂರ್ವನಿರ್ದಿಷ್ಟಸ್ಥಳದವರೆಗೂ ರಥವನ್ನೆಳೆದು ನಿಲ್ಲಿಸಬೇಕೆಂದು ವೈಖಾನಪಾಂಚರಾತ್ರ ಶಾಸ್ತ್ರದಲ್ಲಿ ಪರಮಮಿಶ್ರಮಾರ್ಗದಲ್ಲಿನ ವಿಧಿಗಳಲ್ಲಿ ಹೇಳಿರುತ್ತದೆ. ಖಮುಷ್ಯಾಶ್ರಮವಾಗಿಯೂ ಜಾಗರೂಕವಾಗಿಯೂ ಅಗ್ರಹಾರವಾಗಿಯೂ ಇರುವ ಸ್ಥಳಗಳಲ್ಲಿನ್ನಾತ್ರ ಮೇಲ್ಕಂಡಂತೆ ನಡಿಸಬೇಕೆಂದೂ ಅಕಸ್ಮಿಕವಾಗಿ ಅನ್ಯಥಾ ದಂಭ ಮೋಹಾದಿಗಳಿಂದ ಜರಗಿಸಿದರೆ ರಾಜ ರಾಷ್ಟ್ರ ಯಜಮಾನಾರ್ಚಕಾದಿಗಳಿಗೆ ಮಹಾದೋಷಗಳು ಪ್ರಾಪ್ತಿಸುವುದಲ್ಲದೆ ಕ್ಷಾಮಾದಿಗಳು ಸಂಭವಿಸುತ್ತದೆಂದೂ ಹೇಳಿರುತ್ತದೆ. ಗ್ರಾಮಪುರಾದಿಗಳಲ್ಲಿರುವ ದೊಡ್ಡ ರಥಗಳನ್ನೂ ಸಣ್ಣ ರಥಗಳನ್ನೂ ಬ್ರಾಹ್ಮಣಾದಿ ಜಾತಿತ್ರಿವರ್ಣದವರೂ ಅಪಕರ್ಷಣವನ್ನು ಮಾಡಬೇಕೆಂದೂ ಇಂತಹ ಸ್ಥಳಗಳಲ್ಲಿಯೂ ಮೇಲ್ಕಂಡ ಸಮಸ್ತ ದೋಷಾದಿಗಳು ಸಂಭವಿಸದಿರುವುದಕ್ಕಾಗಿ ಈ ಗ್ರಾಮಾದಿಗಳಲ್ಲಿ ಪೃಥಮತಃ ಬ್ರಾಹ್ಮಣರೇ ರಥವನ್ನೆಳೆಯುವುದಕ್ಕೆ

ಬ-ವ ನಿಯಮವಿಲ್ಲವೆಂತಲೂ ಭಗವಚ್ಛಾಸ್ತ್ರದಲ್ಲಿ ಘಂಟಾಘೋಷವಾಗಿ ಹೇಳಿರುತ್ತದೆ. ಪೂರ್ವದಿಂದಲೂ ಯಾವ ಯಾವ ಸ್ಥಳಗಳಲ್ಲಿ ಹೇಗೆ ಹೇಗೆ ಆನೂಚಾನವಾಗಿ ರಥೋತ್ಸವವು ನಡೆದುಬಂದಿರುತ್ತದೆಯೋ ಹಾಗೆಯೇ ಜರಿಗಿಸುವುದು ಧರ್ಮವಾಗಿರುತ್ತದೆ. ಅದಕ್ಕೆ ವಿರುದ್ಧವಾಗಿ ಪ್ರಕೃತದಲ್ಲಿ ಆಚರಿಸಕೂಡದು.

ಪ್ರಕೃತದಲ್ಲಿ ಮುದ್ರಿತವಾಗಿರುವ ಪ್ರತಿಷ್ಠಾಪ್ರಕಾಶ, ಪ್ರತಿಷ್ಠಾಮ್ನಯಾಖ್ಯ, ಪ್ರತಿಷ್ಠಾಸಂಗ್ರಹ, ಕುಂಡಕಲ್ಪದ್ರುಮ, ಕುಂಡಾರ್ಕ, ಕುಂಡಸಿದ್ಧಿ ಎಂಬವುಗಳಲ್ಲಿಯೂ ಸ್ಮೃತಿನಿಬಂಧನಕಾರರು ತನ್ನ ತನ್ನ ನಿಬಂಧನಗ್ರಂಥಗಳಲ್ಲಿಯೂ, ಬೋಧಾಯನ ಗೃಹ್ಯಶೇಷಸೂತ್ರದಲ್ಲಿಯೂ, ಆಶ್ವಲಾಯನ ಗೃಹ್ಯಪರಿಶಿಷ್ಟದಲ್ಲಿಯೂ ವೈದಿಕವೆಂದು ಭ್ರಾಂತಿಯಿಂದ ಬರೆದಿರುವ ಪ್ರತಿಷ್ಠಾಪೂಜಾದಿ ಪ್ರಕರಣಗಳೆಲ್ಲವೂ ಕೇವಲ ತಾಂತ್ರಿಕ ಆಗಮಸಿದ್ಧಾಂತದವರನುಷ್ಠಿಸುವ ಸ್ವಯಂವ್ಯಕ್ತಾದಿ ಸ್ಥಲೋಕ್ತಮಾರ್ಗಗಳಲ್ಲಿನ ಪ್ರಕರಣಗಳು. ಕೇವಲ ಮಾನುಷಸ್ಥಲಕ್ಕೂ ಸ್ವಯಂವ್ಯಕ್ತರೂಪಾಸ್ಥಾಪನ ರೂಪಾಸ್ಥಳಗಳಿಗೂ ಸಂಬಂಧಪಟ್ಟವುಗಳಲ್ಲ ಸ್ಮೃತಿನಿಬಂಧನಕಾರರಿಗೆ ಸ್ವಾಯಂಭುವಾದಿ ಸ್ಥಲಭೇದಗಳು ತಾಂತ್ರಿಕ, ಮಿಶ್ರವೈದಿಕ ಮಾರ್ಗಭೇದಗಳು ಶುದ್ಧಾಂಗವಾಗಿ ತಿಳಿಯದು. ಶೈವಪಾಂಚರಾತ್ರ ವೈಖಾನಸಕಾಸ್ತ್ರಾಗಳಲ್ಲಿ ಸ್ವಯಂವ್ಯಕ್ತಾದಿ ಮಾರ್ಗಗಳಾದ ಆಗಮಾದಿ ಸಿದ್ಧಾನ್ತೊ ವಿಧಿಗಳಲ್ಲಿಯೇ ವೇದಮಂತ್ರಗಳನ್ನು ಸೇರಿಸಿ ಬರೆದಿರುತ್ತಾರೆ. ಅನಾಗಮಜ್ಞರಾದ ವೈದಿಕಮಾರ್ಗದವರು ನಿಬಂಧನಕಾರರು ನಿರೂಪಿಸಿರುವ ಪಾಷಂಡಮಾರ್ಗವೆಂದು ಸ್ಮೃತಿಗಳಲ್ಲಿ ಕೇವಲ ನಿಷೇಧಿಸಲ್ಪಟ್ಟಿರುವ ತಾಂತ್ರಿಕಮಾರ್ಗದಲ್ಲಿನ ಭಾಗಗಳೆಲ್ಲಾ ವೈದಿಕಮಾರ್ಗವೆಂದು ಭ್ರಾಂತಿಗೊಳಪಟ್ಟು ಸ್ಮೃತಿನಿಬಂಧನಗ್ರಂಥಗಳಲ್ಲಿನ ಪೂಜಾಪ್ರತಿಷ್ಠಾದಿಗಳನ್ನೇ ಸ್ವಾನುಷ್ಠಾನದಲ್ಲಿಟ್ಟುಕೊಂಡಿರುತ್ತಾರೆ. ಇದರಿಂದ ರಾಜರಾಷ್ಟ್ರಕ್ಕೂ ಆವರಿಗೂ ವಿಶೇಷವಾಗಿ ದೋಷಗಳು ಸಂಭವಿಸುತ್ತದೆ. ಪೂರ್ವಾಚಾರ್ಯರಾದ ಶ್ರೀಕಂಠಶಿವ, ಅಘೋರಶಿವ, ಯತೀಂದ್ರಪ್ರಭೃತಿಗಳವರು ಬರೆದಿರುವ ಗ್ರಂಥಗಳನ್ನು ನೋಡಿದರೆ ಆಗಮಸಿದ್ಧಾಂತಮಾರ್ಗ, ಮಿಶ್ರಮಾರ್ಗ, ವೈದಿಕಮಾರ್ಗಗಳುವ್ಯಕ್ತವಾಗುತ್ತದೆ.

ಅನಾವೃಷ್ಟಿ ಮತ್ತು ಹ್ಲೌಮಾದ್ಯುಪದ್ರವಗಳ ನಿವಾರಣೆಗಾಗಿ ಅರ್ಹಳಲ್ಲದ ಆಚಾರ್ಯಪದಾಧಿಕಾರವಿಲ್ಲದೆ ಇರುವ ಅದೀಕ್ಷಿತರು ಗೌರ್ನಮೆಂಟಿನವರ

ದ್ರವ್ಯಸಹಾಯದಿಂದ ದೇವಾಲಯಗಳಲ್ಲಿ ಜಪ ತಪಹೋಮಾರ್ಚನಾದಿಗಳನ್ನು ಏನುಮಾಡಿದರೂ ಬೂದಿಯಲ್ಲಿ ಹೋಮಮಾಡಿದಂತೆ ನಿಷ್ಪ್ರಯೋಜನವಾಗಿ ಅನಾವೃಷ್ಟ್ಯಾದಿಗಳು ನಿವಾರಣೆಯಾಗದೆ ತದಧಿಕವಾಗಿ ಅಭಿವೃದ್ಧಿಯನ್ನು ಹೊಂದುತ್ತದೆ. ಅದೀಕ್ಷಿತರು ಪರಾರ್ಥವಾಗಿ ಆಲಯಗಳಲ್ಲಿ ಯಾವ ಪದಾಧಿಕಾರವನ್ನು ವಹಿಸಿ ಮಾಡುವುದಕ್ಕೂ ಮಾಡಿಸುವದಕ್ಕೂ ಸಹ ಶುದ್ಧಾಂಗವಾಗಿ ಅಧಿಕಾರವಿರುವುದಿಲ್ಲ. ರುದ್ರಾಭಿಷೇಕ, ರುದ್ರಹೋಮ, ಸಹಸ್ರ ಕುಂಭಾಭಿಷೇಕ, ಪರ್ಜನ್ಯಜಪ, ವರುಣಜಪ, ನವಗ್ರಹಜಪ, ಸೂರ್ಯನಮಸ್ಕಾರ, ಸಪ್ತಶತಿಪಾರಾಯಣ, ಚಂಡೀಹೋಮ, ವಿರಾಟಪರ್ವ, ಸುಂದರಕಾಂಡ ಪಾರಾಯಣ ಇತ್ಯಾದಿಗಳನ್ನು ಹ್ಞಾಮನಿವಾರಣೆಗಾಗಿ ನಡಸುವುದು ಅಶಾಸ್ತ್ರೀಯವಾಗಿರುತ್ತದೆ. ಭಗವಚ್ಛಾಸ್ತ್ರಗಳಲ್ಲಿ ವಿಶ್ರ, ವೈದಿಕಮಾರ್ಗಗಳ ವಿಧಿಗಳಲ್ಲಿ ಎಲ್ಲಿಯೂ ಮತ್ತು ಶ್ರುತಿ ಸ್ಮೃತಿಗಳಲ್ಲಿಯೂ ಸಹ ಅನಾವೃಷ್ಟಿ ನಿವಾರಣೆಗಾಗಿ ರುದ್ರಾಭಿಷೇಕ, ರುದ್ರಹೋಮಾದಿಗಳನ್ನು ಮಾಡಬೇಕೆಂದು ಹೇಳಿರುವುದಿಲ್ಲ. ಭಗವಚ್ಛಾಸ್ತ್ರದಲ್ಲಿನ ತಂತ್ರಮಾರ್ಗದಲ್ಲಿ ಉಕ್ತವಾಗಿದ್ದಾಗ್ಯೂ, ತದನುಷ್ಠಾನವು ತಾಂತ್ರಿಕ ಅಗಸುಮಾರ್ಗದವರಿಗೆ ವಿಹಿತನೇ ಹೊರತು ಅಸ್ಮದಾದಿಗಳಿಗ ಶ್ರೇಷ್ಠವಾಗಿಲ್ಲ. ಪಾಷಂಡಮಾರ್ಗವಾಗಿರುತ್ತದೆ. ವೈದಿಕದಲ್ಲಿನ ರುದ್ರ, ಪರ್ಜನ್ಯ, ವಾರುಣ, ಅರುಣಮಂತ್ರಗಳಿಗೆ ಬೋಧಾಯನಾಪಸ್ತಂಬಾದಿ ಶ್ರೌತಸೂತ್ರಕಾರರು ತಾಂತ್ರಿಕ ಪೌರಾಣಿಕಮಾರ್ಗಗಳನ್ನನುಸರಿಸದೆ ಕೇವಲ ವೈದಿಕಮಾರ್ಗವಾಗಿ ಕಲ್ಪವನ್ನು ಹೇಳಿರುತ್ತಾರೆ. ಇಂತಹ ವೈದಿಕಮಾರ್ಗವನ್ನು ಅಸ್ಮದಾದಿಗಳು ಪರಿತ್ಯಜಿಸಿದರೆ ಮಹಾದೋಷಗಳಿಗೆ ಪಾತ್ರರಾಗುವೆವು. ಈ ಮೇಲ್ಕಂಡ ಕಲ್ಪಗಳು ಹ್ಞಾಮಾದ್ಯಪದ್ರವ ನಿವಾರಣೆಗೆ ಸಂಬಂಧಪಡುವುದಿಲ್ಲವು. ಮಿಶ್ರ ವೈದಿಕಸ್ಮಾರ್ತಾಧಿಕಾರರು ಆಲಯಗಳಲ್ಲಿ ಹ್ಞಾಮಾದ್ಯುಪದ್ರವ ನಿವಾರಣೆಗಾಗಿ ಸ್ವೇಚ್ಛಾನುಸಾರ ನಡಿಸದೆ ಸ್ವಮಾರ್ಗೋಕ್ತ ವಿಧಿಗಳಾದ ವಾರುಣೇಷ್ಟಿ, ಪರ್ಜನ್ಯೇಷ್ಟಿಯನ್ನುಜರಿಗಿಸಬೇಕು. ಈಉಭಯಮಾರ್ಗದವರೂ ಸ್ವಸ್ವಮಾರ್ಗವನ್ನು ಪರಿತ್ಯಜಿಸಿ ಅನುಕ್ತಮಾರ್ಗವಾಗಿ ಮಾಡಿದರೆ ರಾಜ ರಾಷ್ಟ್ರಕ್ಕೆ ವಿಶೇಷದೋಷಗಳುಂಟಾಗುವುದೆಂದು ಭಗವಚ್ಛಾಸ್ತ್ರಗಳಲ್ಲಿ ಘಂಟಾಘೋಷವಾಗಿ ಹೇಳಿರುತ್ತದೆ. ಆದುದರಿಂದ ಅನಧಿಕಾರರು ಮಾಡಿಸುವುದು ಸ್ರಮಾದವಶವು.

ಕೆಲವು ದೇವಾಲಯಗಳಲ್ಲಿ ಮೊಲದೇವರಿಗೂ ಉತ್ಸವಬಿಂಬಗಳಿಗೂ

ಕೊಬರಿ, ದಾಳಿಂಬೆಬೀಜಾದಿಗಳಿಂದಲೂ ಮತ್ತು ಸ್ವಾಮಿಯವರಿಗೆ ಕೈ ಕಾಲುಗಳನ್ನು ಕಟ್ಟಿ ವಿಧವಿಧವಾಗಿ ನಾಟಕಶಾಲೆಗಳಲ್ಲಿ ಪುರುಷರು ಸ್ತ್ರೀ ಸ್ವರೂಪವನ್ನೂ, ಸ್ತ್ರೀಯರು ಪುರುಷಸ್ವರೂಪವನ್ನೂ ಬಣ್ಣಗಳಿಂದ ಕೂಡಿ ಹೇಗೆಪ್ರವರ್ತಿಸಿ ಜನರಿಗೆವ್ಯಾವೇ[illegible]ಪನನ್ನುಂಟುಮಾಡುತ್ತಾರೆಯೋ ಹಾಗೆಯೇ ಅದಕ್ಕಿಂತಲೂ ಅಧಿಕವಾಗಿ ಅರ್ಚಕರು ಅಲಂಕಾರಗಳನ್ನು ಮಾಡುತ್ತಾರೆ. ಇದು ಶಾಸ್ತ್ರೀಯವಾದುದಲ್ಲವು. ದಿವ್ಯದೇಶಗಳಲ್ಲಿ ಎಲ್ಲಿಯೂ ಹೀಗೆ ಇದುವರೆಗೆ ಯಾರೂ ಮಾಡಿರುವದಿಲ್ಲ. ಭಗವಚ್ಛಾಸ್ತ್ರಕ್ಕೂ ಶಿಷ್ಟಾಚಾರಕ್ಕೂ ಬಹಳ ವಿರೋಧವಾಗಿರುತ್ತದೆ. ಹೀಗೆ ನಡೆಸುವುದರಿಂದ ರಾಜ ರಾಷ್ಟ್ರ ಯಜಮಾನಾರ್ಚಕರಿಗೂ ಮಹಾದೋಷಗಳು ಪ್ರಾಪ್ತಿಸುತ್ತದೆಂದು ಶೈವ ಪಾಂಚರಾತ್ರ ವಿಖನಸಶಾಸ್ತ್ರಗಳಲ್ಲಿ ವಿಪುಲವಾಗಿ ಹೇಳಿರುತ್ತದೆ. ಇಂಥಾ ಬಿಂಬಗಳ ಸಂದರ್ಶನವನ್ನೇ ಮಾಡಕೂಡದು. ಆದರೆ ಪ್ರತ್ಯಕ್ಷದಲ್ಲಿ ಇಂತಹ ಸ್ಥಲಗೆಳಲ್ಲಿನ ಪೂಜಕರು ದೋಷಗಳನ್ನು ನೋಡುವುದಿಲ್ಲ. ಇವರಿಗ ಅರ್ಥ ಸಂಗ್ರಹಣವೂ ದಾಂಭಿಕವೂ ಸ್ವಪ್ರತಿಷ್ಠತೆಯೂ ಮುಖ್ಯವಾದುದು. ಶಾಸ್ತ್ರ ವಿಷಯವು ಶೂನ್ಯಾಂಗವಾಗಿತಿಳಿಯದು. ಇಂತಹರಿಗೆ ನರಕಯಾತನೆಗಳು ಬ್ರಹ್ಮ ಕಲ್ಪಪರ್ಯಂತರವೂ ತಪ್ಪಲಾರದೆಂದು ಪಾಶುಪತ, ಪಾಂಚರಾತ್ರ ಸ್ಮೃತಿ ಗಳಲ್ಲಿ ಹೇಳಿರುತ್ತದೆ. ಆದುದರಿಂದ ಇಂತಹ ಸ್ಥಲಗಳು ರಂಗಸ್ಥಲಗಳೇ ಹೊರತು ದೇವಾಲಯಗಳಲ್ಲ. ಜೀವನೋಪಾಯಕ್ಕೆ ಇದೊಂದು ವಿಧವಾದ ಮಾರ್ಗವು. ಇದು ಪ್ರಮಾದವಶವಾದುದು. ಇನ್ನೂ ಕೆಲವುಕಡೆಯಲ್ಲಿ ಉತ್ಸವಾದಿಗಳಲ್ಲಿಯೂ ರಥಗಳಲ್ಲಿಯೂ ಅಲಂಕಾರಮಂಟಪಗಳಲ್ಲಿಯೂ ದೇವರುಗಳ ತಲೆಯಮೇಲೂ ಕೈಗಳಲ್ಲೂ ಈಗಿನ ಎಲೆಕ್ಟ್ರಿಕ್ ದೀಪಗಳನ್ನಿಟ್ಟು ಉತ್ಸವಾದಿಗಳೇ ಮೊದಲಾದ ಕೈಂಕರ್ಯಗಳನ್ನು ನಡೆಸುವುದೂ ದೇವರುಗಳಿಗೆ ಎಲೆಕ್ಟ್ರಿಕ್ ದೀಪಗಳ ಹಾರಗಳನ್ನು ಹಾಕಿಸಿ ವಿಧವಿಧವಾದ ಆನಂದನೆಳನ್ನು ಹೊಂದುತ್ತಲಿರುವುದೂ ಈಗಿನಕಾಲದಲ್ಲಿ ಪ್ರತ್ಯಕ್ಷಾನುಭವದಲ್ಲಿಯೇ ಇರುತ್ತದೆ. ಇದು ಅಶಾಸ್ತ್ರೀಯವಾದುದು. ಇದಲ್ಲದ ರಥಗಳಲ್ಲಿಯೂ ಉತ್ಸವಗಳಲ್ಲಿಯೂ ಒಂದು ಸಾರಿ ದೀಪಗಳನ್ನು ಬಿಟ್ಟು ಅನಂತರ ಯಾವವಿಧದಿಂದಲಾದರೂ ದೀಪಗಳಿಗೆ ಆಚಮನೆಯುಂಟಾಗಿ ದೀಪಗಳು ಅವಿತುಹೋದಕ್ಷಣದಲ್ಲಿಯೇ ಪುನಃ ಜನಗಳು ರಥಗಳವೇಲೂ ಉತ್ಸವಗಳಮೇಲೂ ಮಂಟಪಾದಿಗಳಲ್ಲಿಯೂ ದೇವರಸಾನ್ನಿಧ್ಯವನ್ನು ಪ್ರವೇಶಿಸಿ ಪದೇಪದೇಸರಿಪಡಿಸುತ್ತ

ಲಿರುವರು. ಹೀಗೆ ಮಾಡುವುದರಿಂದ ಅರ್ಚಕರು ಪ್ರಾಯಶ್ಚಿತ್ತಾದಿಗಳನ್ನು ಮಾಡುತ್ತಾರೆ. ಆಕಸ್ಮಿಕವಾಗಿ ನಿಲ್ಲಬಹುದಂತಹ ಕಾರ್ಯಗಳಿಗೇನಾದರೂ ಬಾಧಕ ಪುಂಟಾದರ ಅದಕ್ಕೆ ಪ್ರಾಯಶ್ಚಿತ್ತಾದಿಗಳನ್ನ ಮಾಡಬೇಕೆಂದು ಶಾಸ್ತ್ರದಲ್ಲಿ ರುತ್ತದೆಯೇ ಹೊರತು ಪದೇಪದೇ ಬಾಧಕಗಳುಂಟಾಗಿ ನಿಲ್ಲುವ ಕಾರ್ಯಗಳಿಗೆ ಪುನಃ ಪುನಃ ಪ್ರಾಯಶ್ಚಿತ್ತಾದಿಗಳನ್ನು ಮಾಡಬೇಕೆಂದು ಯಾವ ಶಾಸ್ತ್ರ ದಲ್ಲಿಯೂ ಹೇಳಿರುವುದಿಲ್ಲ

ದೇವಾಲಯಗಳಲ್ಲಿ ಪ್ರತಿದಿನವೂ ಕಾಲನಿಯಮಾದಿಗಳನ್ನನುಸರಿಸಿ ಪೂಜೆ, ನಂಗಳಾರತಿ, ಮಹಾಮಂಗಳಾರತಿ ಮೊದಲಾದ ಕಾರ್ಯಗಳು ನಡೆ ಯುತ್ತಲಿವೆ. ಹೀಗಿರುವಲ್ಲಿ ಕೆಲವು ಸ್ಥಳಗಳಲ್ಲಿಮಾತ್ರ ಕಾಲ ನಿಯಮಾದಿ ಗಳನ್ನು ತ್ಯಜಿಸಿ ಭಕ್ತರ ಇಷ್ಟಬಂದಕಾಲಗಳಲ್ಲಿ ಪೂಜೆ, ಮಂಗಳಾರತಿ ಮೊದ ಲಾದ ಕಾರ್ಯಗಳನ್ನು ಮಾಡಿಕೊಡುತ್ತಾರೆ. ಹೀಗೆ ಮಾಡುವುದೆಲ್ಲಾ ಕೇವಲ ಅರ್ಚಕರು ತಮ್ಮ ತಮ್ಮ ಅರ್ಥಪ್ರಯೋಜನಗಳನ್ನು ಹೊಂದುವುದಕ್ಕೂ ಮತ್ತು ಭಕ್ತಾದಿಗಳುಂಟುಮಾಡುವ ಭಯೋತ್ಪಾತಕಗಳಿಗೂ ಆಲ್ಲದೆ ಶಾಸ್ತ್ರ ಸಂಬಂಧವಾಗಿ ಮಾಡುವ ಕಾರ್ಯಗಳಲ್ಲ. ಈರೀತಿ ಕಾಲನಿಯಮಾದಿಗಳನ್ನು ಬಿಟ್ಟು ಮಾಡಬೇಕೆಂದು ಶೈವ, ಪಾಂಚರಾತ್ರ, ವಿಖನಸ ಶಾಸ್ತ್ರಗಳಲ್ಲಿ ಎಲ್ಲಿಯೂ ಹೇಳಿರುವುದಿಲ್ಲ ಇದರಿಂದ ರಾಜರಾಷ್ಟ್ರಗಳಿಗೂ ಪ್ರಜೆಗಳಿಗೂ ಪ್ರತ್ಯವಾಯುವು ಸಂಭವಿಸುತ್ತದೆ.

ಕೆಲವು ಗ್ರಾಮಗಳಲ್ಲಿನ ಶಿವಾಲಯಗಳಲ್ಲಿ ಪಾಂಚರಾತ್ರಶಾಸ್ತ್ರದಿಂದ ರಥೋತ್ಸವ ಕರ್ಮವನ್ನು ಅನಾಗೆ ಮಜ್ಜೂರಾಗಿಯೂ ಆನಧಿಕಾರಿಗಳಾಗಿಯೂ ಇರುವ ಅದೀಕ್ಷಿತರು ಮಾಡಿಸುತ್ತಲಿದ್ದಾರೆ. ಇದರಿಂದಲೂ ಪ್ರತ್ಯವಾಯ ಗಳು ಅನೇಕವುಂಟು. ಇಂಥ ಪ್ರಮಾದನಶವಾದುದೂ ಅನಿವಾರಣೀಯ ವಾದುದೂ ಆಗಿರುತ್ತದೆ.

ದಕ್ಷಿಣದೇಶದಲ್ಲಿರುವ ಪ್ರತಿಯೊಂದು ದೇವಾಲಯಗಳಲ್ಲಿಯೂ ಮಹೋತ್ಸವಾದಿ ಕಾರ್ಯಗಳಲ್ಲಿಯೂ ನಿತ್ಯಕೈಂಕರ್ಯಗಳಲ್ಲಿ ಸಹ ಒಂದು ಸಹಸ್ರ ಲೋಪಗಳನ್ನು ಮೌಢ್ಯದೆಸೆಯಿಂದಲೂ ವಿದ್ಯಾವಿಹೀನತೆಯಿಂದಲೂ ಸ್ವಸ್ವ ತಿಷ್ಠೆಯಿಂದಲೂ ಅರ್ಚಕರೂ ಯಾಜ್ಞಿಕರೂ ಜರಿಗಿಸುತ್ತಲಿರುವುದಲ್ಲದೆ ಆಯಾ ದೇವಾಲಯಗಳಿಗೆ ನೇಮಕರಾದ ಧರ್ಮಾಧಿಕಾರಿ ಪ್ರಭೃತಿಗಳು ಸಹ ಪೂರ್ವದಲ್ಲಿ ರಾಜಾಧಿರಾಜರುಗಳು ಮಾಡಿರುವ ಧರ್ಮಗಳನ್ನು ಆಯಾ ಸಂಸ್ಥಾ

ನಾಧಿಪತಿಗಳು ಚ್ಯುತಿಯಿಲ್ಲದೆ ಅನೂಚಾನವಾಗಿ ಪಾಲನೆಯನ್ನು ಮಾಡಿಕೊಂಡಿ
ಡುಬರುವ ಧರ್ಮಕಾರ್ಯಗಳನ್ನೆಲ್ಲಾ ಪ್ರಕೃತದಲ್ಲಿ ಚ್ಯುತಿಮಾಡುತ್ತಾ
ಸ್ವೇಚ್ಛೆಯಾಗಿ ಅವರುಗಳ ಇಷ್ಟಾನುಸಾರ ನಡಿಸುತ್ತಲಿರುವರು. ಸುಖ್ಯ
ವಾಗಿ ಶಾಸ್ತ್ರ ಪರಿಪಾಲನೆಯನ್ನೂ ಧರ್ಮಪರಿಪಾಲನೆಯನ್ನೂ ಮಾಡತಕ್ಕ
ಧರ್ಮಪ್ರಭುಗಳೂ ಮಹಾಧಿಪತಿಗಳೂ ಸಹ ವಿರಳನಾಗಿರುವುದೇ ಕಾರಣವು;
ಇಂತಹ ಲೋಪಗಳು ಅನೇಕವಿರುವುದರಿಂದ ಅವುಗಳನ್ನೆಲ್ಲಾ ಇಲ್ಲಿ ವಿಶದಪಡಿ
ಸಲು ಗ್ರಂಥವಿಸ್ತರಭೀತಿಯಿಂದ ಕೆಲವು ವಿಷಯಗಳನ್ನುಮಾತ್ರ ಸರ್ವರ
ಅವಗಾಹನೆಗೋಸ್ಕರವಾಗಿ ಬರೆದಿರುತ್ತೇನೆ. ಈ ದೈವಿಕಶಾಸ್ತ್ರ ಸಂಬಂಧ
ವಾದ ಲೋಪಗಳೆಲ್ಲವನ್ನೂ ಪ್ರತಿ ಸ್ಥಲದಲ್ಲಿಯೂ ನಾನು ಪ್ರತ್ಯಕ್ಷದಲ್ಲಿ
ನೋಡಿರುತ್ತೇನೆ. ದೈವಿಕಶಾಸ್ತ್ರವಿಷಯದಲ್ಲಿಮಾತ್ರ ಹೇಳಲಾವಶ್ಯಕವಿಲ್ಲ
ಸ್ವಪ್ರತಿಷ್ಠೆಗೋಸ್ಕರವಾಗಿ ಈ ವ್ಯಾಸವನ್ನು ಬರೆದವನಲ್ಲ.

ಮೇಲ್ಕಂಡ ಒಂದೊಂದು ವಿಷಯವನ್ನೂ ವಿವರುವಾಗಿ ಶೈವ ಪಾಂಚ
ರಾತ್ರ ವೈಖಾನಸ ಶಾಸ್ತ್ರಗಳಲ್ಲಿನ ಸಪ್ರಮಾಣದೊಡನೆ ಮುಂದೆ ಪ್ರಚುರಪಡಿ
ಸುತೇನೆ. ಕೇವಲ ಸ್ವಯಂವ್ಯಕ್ತರೂಪ ಸ್ಥಾಪನರೂಪ ಸ್ಥಲೋಪದಿಷ್ಟವಾದ
ಸ್ವಸ್ವಸಿದ್ಧಾಂತಮಾರ್ಗವಾದ ಕರ್ಮದಲ್ಲಿ ದೇಶಭೇದಕ್ಕೆ ಉಕ್ತವಾದ ಶಾಸ್ತ್ರದಲ್ಲಿ
ಲಕ್ಷ್ಯವಿಟ್ಟರೆ ರಾಷ್ಟ್ರಕ್ಕೆ ದೋಷಗಳೂ, ವಂಶನಷ್ಟಕ್ಕೆ ಕಾರಣವೂ ಉಂಟಾ
ಗುವುದಿಲ್ಲ. ಇಂತಹ ಸ್ವಸ್ವಮಾರ್ಗಾಚರಣೆಯನ್ನೂ, ದೇಶಭೇದದಿಂದ ಹೇಳುವ
ಆಯಾ ಶಾಸ್ತ್ರಾನುಷ್ಠಾನವನ್ನೂ ಭ್ರಾತೃಸಹೋದರರಾದ ಆಚಾರ್ಯರೂ ಪೂಜ
ಕರೂ ಭಗವದ್ವಾಕ್ಯಗಳಲ್ಲಿ ವಿಶ್ವಾಸವಿಟ್ಟು, ಅಹಂಭಾವವನ್ನು ತೊರೆದು, ನನ್ನ
ಲೇಖನವನ್ನು ತಿರಸ್ಕರಿಸದೆ ದಿನಕ್ರಮವಾಗಿ ಪ್ರೇಪ್ರದಲ್ಲಿಯೇ ಅನುಷ್ಠಾನದಲ್ಲಿ
ತರಬೇಕು. ಇಂತಹ ಬದಲಾವಣೆಯನ್ನು ಯಾಜ್ಞಿಕರೂ ಯಾಜಕರೂ ರಾಜ
ಕೀಯ ನಿರ್ಬಂಧವಿಲ್ಲದೆ ತಾವಾಗಿಯೇ ತಾವು ತಿದ್ದಿಕೊಳ್ಳುವುದಿಲ್ಲವು. ಆದುದ
ರಿಂದ ರಾಷ್ಟ್ರ ಕ್ಷೇಮಾಭಿವೃದ್ಧಿಗಳಲ್ಲಿ ಬದ್ಧದೀಕ್ಷರಾದ ಶ್ರೀಮನ್ಮಹಾರಾಜಾಧಿ
ರಾಜರುಗಳೂ, ಸಾಮಂತರಾಜರೂ, ಅಮಾತ್ಯರೂ, ಮಹಾಧಿಪತಿಗಳೂ, ಧರ್ಮ

ಜ್ಞರಾದ ಶಿಷ್ಟರೂ, ದೈವವಿದ್ಯಾಭಿಜ್ಞರೂ ಸಹ ನಾನು ವಿಚಾರಪುರಸ್ಸರವಿಮರ್ಶೆ ಮಾಡಿರುವ ಅಂಶಗಳನ್ನು ನಿರಾಕ್ಷೇಪವಾದುದರಿಂದ ಪ್ರತಿಸ್ಥಳದಲ್ಲಿರುವ ದೇವಾಲಯಗಳಲ್ಲಿನ ಅರ್ಚಕ,ಪಾರುಪತ್ಯ, ಧರ್ಮದರ್ಶಿಗಳಿಗೆ ಆಯಾಸಂಸ್ಥಾನದ ಗೌರ್ನಮೆಂಟಿನವರು ನಿರ್ಬಂಧ ಪೂರ್ವಕವಾದ ನಿರೂಪನವನ್ನುಮಾಡಿ ಗೌರ್ನ ಮೆಂಟಿನ ಮೂಲಕ ಪ್ರಕಟಿಸಲ್ಪಡುವ ನನ್ನ ಗ್ರಂಥಗಳಲ್ಲಿ ಎಷ್ಟುಮಟ್ಟಿಗೆ ಪೂಜಾದಿ ವಿಧಾನಗಳನ್ನು ಬರೆದಿರುತ್ತದೆಯೋ ಆ ಉಕ್ತರೀತಿಯಾಗಿ ಪ್ರತಿ ದೇವಾಲಯಗಳಲ್ಲಿಯೂ ಪೂಜಾದಿಕರ್ಮಗಳನ್ನು ಆರ್ಚಕ ಯಾಜ್ಞಿಕರಿಂದ ಮಾಡಿಸುತ್ತಾ ಪ್ರಚಾರಕ್ಕೆ ತರಬೇಕೆಂದು ಸರ್ವರನ್ನೂ ಪ್ರಾರ್ಥಿಸುವೆನು. ಈ ವಿಷಯವು ಮಹಾಪ್ರಯೋಜನಕಾರಿ ಯಾದುದರಿಂದ ವಿಚಾರಮಾಡದೆ ಬಿಡತಕ್ಕುದಲ್ಲವೆಂದು ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವೆನು,

---

ವಿ. ಬಿ. ಸುಬ್ಬಯ್ಯ ಅಂಡ್ ಸನ್ಸ್, ಪ್ರಿಂಟರ್ಸ್, ಬೆಂಗಳೂರು ಸಿಟಿ.

ಶ್ರೀ ದೇವಯಾಗ ವಿಷಯಕೋಪನ್ಯಾಸ

ಶುದ್ಧಾಶುದ್ಧ ಪತ್ರಿಕಾ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೧	೧೩	ಗೃಹ್ಯಪ	ಗೃಹ್ಯಪ್ರ
೩	೩	ತಾಂತ್ರಕ	ತಾಂತ್ರಿಕ
,,	೨೧	ವಂಶಕ್ಷ	ವಂಶಃಕ್ಷ
,,	೨೩	ಸ್ವಯಂವ್ಯ	ಸ್ವಯಂವ್ಯ
೬	೬	ತುಷ್ಣಯಿಾಂತ	ತುಷ್ಣಯಾಂತ
೭	೪	ಸಂಪ್ರದೌ	ಸಂಪ್ರುದಾ
,,	೬	ವಿಚಾರಿವ	ವಿಚಾರವ
,,	೮	ಸ್ವಯಂ	ಸ್ವಯಂ
೮	೨೨	ದುರ್ಮಾರ್ಗದಲ್ಲಿ ಕ್ರೂರನಾದ ರುದ್ರನು ಮತ್ತಷ್ಣು	ದುರ್ಮಾರ್ಗರಲ್ಲಿರುದ್ರನು ಕ್ರೂರನಾಗಿ
೧೧	೧	ತಿಂತ್ರ	ತಂತ್ರ
,,	೩	ತಂತ್ರದಿಂದಲೂ ಉತ್ತರದೇಶದಲ್ಲಿನ ದಿವ್ಯದೇಶಗಳಲ್ಲಿ ಆಯಾಯ ದಿವ್ಯದೇಶಗೆಳಿಗೆ ಆಯಾಯ ಉಕ್ತ ಶ್ರೀ ಪಾಂಚರಾತ್ರ ತಂತ್ರರೀತಿಯಾಗಿಯೂ ಅಥವಾ	
,,	೪	ಉಭಯರ	ಉಭಯರು
೧೨	೧೪	ಗಿ ತ್ಮದೆ	ಗಿರುತ್ಮದೆ
೧೪	೫	ಅಧಿಕಾರವಿಲ್ಲ	ಅಧಿಕಾರರಲ್ಲ

ಪುಟ	ಪಂಙ್ತಿ	ಆಶುದ್ಧ	ಶುದ್ಧ
೧೫	೬	ಸಾನಂತ	ಸಾಮಂತ
೨೩	೨೪	ನು ೨	ನುಷ್ಯಾ
೨೪	೧೫	ಹೇರುತ್ತದೆ	ಹೇಳಿರುತ್ತದೆ
,,	೨೫	ಸುವುದಾದದರಿಂದ	ಸುವುದಾದುದರಿಂದ
೨೩	೨೬	ಣೋತ್ಸಎವನ್ನು	ಣೋತ್ಸವವನ್ನು
೨೮	೨೮	ಂಥವನ್ನೆಳೆ	ರಥವನ್ನೆಳೆ
೨೯	೧೭	ಸಿದ್ಧಾನ್ತೊ	ಸಿದ್ಧಾನ್ತೋಕ್ತ
೩೦	೧೩	ಉಕ್ತವಾಗಿದ್ದಾಗೊ	ಉಕ್ತವಾಗಿದ್ದಾಗ್ಗೂ
೩೨	೧೩	ಭಯೋತ್ಪಾತ	ಭಯೋತ್ಪಾತ
೩೩	೧೪	ಸುತೇನ	ಸುತ್ತೇನೆ